RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎನ್. ಓಲೇಕಾರ | ಸಿಇಒ: ಚಂದ್ರಶೇಖರ ಎನ್.ಕೆ. | ಸಹ ಸಂಪಾದಕರು: ಶಿವಕುಮಾರ

ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಸಂಪುಟ (Volume): 1 ಸಂಚಿಕೆ (Issue): 229 ಪುಟ (Page): 4 ದರ Rs. 2 ಬುಧವಾರ 18 ನವೆಂಬರ್ 2026 ● 18 NOVEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಜಗತ್ತಿಗೆ ಈಗ ಶಾಂತಿಯ ಅಗತ್ಯತೆ ಹೆಚ್ಚಿದೆ

23ನೇ ಆಸಿಯಾನ್–ಭಾರತ ಶೃಂಗಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿಕೆ

ಮನಿಲಾ: ಪ್ರಧಾನಮಂತ್ರಿ ನರೇಂದ್ರ ಮೋದಿ ಮಂಗಳವಾರ ಫಿಲಿಪೈನ್ಸ್‌ನ ಮನಿಲಾದಲ್ಲಿ ನಡೆದ 23ನೇ ಆಸಿಯಾನ್–ಭಾರತ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜಾಗತಿಕ ಬಿಕ್ಕಟ್ಟುಗಳ ಸರಣಿಯ ನಡುವೆ ಹೆಚ್ಚಿನ ಸಹಕಾರಕ್ಕೆ ಕರೆ ನೀಡಿದ ಅವರು, "ಜಗತ್ತಿಗೆ ಈಗ ಶಾಂತಿ, ಸ್ಥಿರತೆ ಮತ್ತು ಮುನ್ಸೂಚನೆಗೆ ಒಳಪಡುವಂತಹ ಪರಿಸ್ಥಿತಿಯ ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಿದೆ" ಎಂದು ಅಭಿಪ್ರಾಯಪಟ್ಟರು.

ಆಗ್ನೇಯ ಏಷ್ಯಾದ ರಾಷ್ಟ್ರಗಳ ಸಂಘಟನೆಯ (ಎಸಿಇಂಓ) ಜೊತೆ ಭಾರತದ ಬೆಳೆಯುತ್ತಿರುವ ಪಾಲುದಾರಿಕೆಯನ್ನು ಎತ್ತಿ ತೋರಿಸಿದ ಪ್ರಧಾನಿ ಮೋದಿ, ಉಭಯ ಕಡೆಯ ನಡುವಿನ ಬಾಂಧವ್ಯವು ಕೇವಲ ಸಾಂಸ್ಕೃತಿಕ ಮತ್ತು ನಾಗರಿಕ ಪರಂಪರೆಯ ಹಂಚಿಕೆಗೆ ಮಾತ್ರ ಸೀಮಿತವಾಗಿರದೆ, ಡಿಜಿಟಲ್ ತಂತ್ರಜ್ಞಾನ, ರಕ್ಷಣೆ ಮತ್ತು ಬಾಹ್ಯಾಕಾಶದಂತಹ ಹೊಸ ಕ್ಷೇತ್ರಗಳಿಗೂ ವಿಸ್ತರಿಸಿದೆ ಎಂದು ಹೇಳಿದರು.

2014 ರಿಂದ ಜನರ ನಡುವಿನ ಸಂಪರ್ಕವನ್ನು ಬಲಪಡಿಸಲು ಕೈಗೊಂಡ ವಿವಿಧ ಉಪಕ್ರಮಗಳನ್ನು ಅವರು ಪ್ರಸ್ತಾಪಿಸಿದರು; ಇದರಲ್ಲಿ 100ಕ್ಕೂ ಹೆಚ್ಚು ಉಪಕ್ರಮಗಳು, ಸುಮಾರು 250 'ತ್ವರಿತ ಪರಿಣಾಮ ಬೀರುವ ಯೋಜನೆಗಳು' (Quick Impact Projects) ಮತ್ತು 10,000ಕ್ಕೂ ಹೆಚ್ಚು ಕೌಶಲ್ಯ ಅಭಿವೃದ್ಧಿ ವಿದ್ಯಾರ್ಥಿವೇತನಗಳು ಸೇರಿವೆ.

"ಭಾರತ ಮತ್ತು ಆಸಿಯಾನ್ ಒಟ್ಟಾಗಿ ವಿಶ್ವದ ಜನಸಂಖ್ಯೆಯ ಸುಮಾರು ಕಾಲು ಭಾಗವನ್ನು ಪ್ರತಿನಿಧಿಸುತ್ತವೆ ಎಂದು ಪ್ರಧಾನಮಂತ್ರಿ ಹೇಳಿದರು. ಹೀಗಾಗಿ, ತಮ್ಮ ಸಮಾನ ಭವಿಷ್ಯವನ್ನು ರೂಪಿಸಿಕೊಳ್ಳಲು ಪರಸ್ಪರ ಸಹಕಾರ ಅತ್ಯಗತ್ಯವಾಗಿದೆ. ಈ ವರ್ಷದ ಶೃಂಗಸಭೆಯ ವಿಷಯವಾದ 'ನಮ್ಮ ಭವಿಷ್ಯವನ್ನು ಒಟ್ಟಾಗಿ ರೂಪಿಸುವುದು' ಎಂಬುದನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ಭವಿಷ್ಯವು ಪೈಪೋಟಿಯಿಂದಲ್ಲ, ಬದಲಾಗಿ ಸಹಕಾರದಿಂದ ರೂಪುಗೊಳ್ಳಬೇಕು ಎಂದು ಪ್ರತಿಪಾದಿಸಿದರು.



ಮೋದಿ ಭಾಷಣದ ಪ್ರಮುಖ ಅಂಶಗಳು

- ಕಳೆದ ವರ್ಷಗಳಲ್ಲಿ, ನಮ್ಮ 'ಆಕ್ಟ್ ಈಸ್ಟ್' ನೀತಿಯು ಭಾರತ–ಆಸಿಯಾನ್ ಸಂಬಂಧಗಳಿಗೆ ಹೊಸ ಚೈತನ್ಯ ಮತ್ತು ಆಳವನ್ನು ನೀಡಿದೆ.
- ನಮ್ಮ ಪಾಲುದಾರಿಕೆಯು ಈಗ ಕೇವಲ ಹಂಚಿಕೆಯ ಸಂಸ್ಕೃತಿ ಮತ್ತು ಪರಂಪರೆಗೆ ಸೀಮಿತವಾಗಿಲ್ಲ, ಬದಲಾಗಿ, ಡಿಜಿಟಲ್ ತಂತ್ರಜ್ಞಾನ, ರಕ್ಷಣೆ ಮತ್ತು ಬಾಹ್ಯಾಕಾಶದಂತಹ ಕ್ಷೇತ್ರಗಳಲ್ಲಿ ಹೊಸ ಆಯಾಮಗಳನ್ನು ಅನ್ವೇಷಿಸುವತ್ತ ಸಾಗುತ್ತಿದೆ.
- 2014ರಿಂದ, ಜನರ ನಡುವಿನ ಬಾಂಧವ್ಯವನ್ನು ಬಲಪಡಿಸಲು ನಾವು 100ಕ್ಕೂ ಹೆಚ್ಚು ಉಪಕ್ರಮಗಳನ್ನು ಕೈಗೊಂಡಿದ್ದೇವೆ.
- ನಾವು ಸುಮಾರು 250 ತ್ವರಿತ ಪರಿಣಾಮ ಯೋಜನೆಗಳನ್ನು (ಕಿಣುಛಿಛಿಞ ಖಛಟಠಿಚಿಛಿಣಿ ಕಡಿಠರಿಜಛಿಣಿ) ಪ್ರಾರಂಭಿಸಿದ್ದೇವೆ ಮತ್ತು 10,000ಕ್ಕೂ ಹೆಚ್ಚು ಕೌಶಲ್ಯ ಅಭಿವೃದ್ಧಿ ವಿದ್ಯಾರ್ಥಿವೇತನಗಳನ್ನು ಒದಗಿಸಿದ್ದೇವೆ.
- ಇಂದು ಭಾರತ ಮತ್ತು ಆಸಿಯಾನ್ (ಎಸಿಇಂಓ) ರಾಷ್ಟ್ರಗಳ ನಡುವಿನ ನೇರ ವಿಮಾನ ಸಂಪರ್ಕಗಳು ಹಾಗೂ ಬೆಳೆಯುತ್ತಿರುವ ಪ್ರವಾಸೋದ್ಯಮವು, ನಮ್ಮ ನಡುವೆ ಹೆಚ್ಚುತ್ತಿರುವ ನಿಕಟತೆಗೆ ಸಾಕ್ಷಿಯಾಗಿವೆ.
- ಕಳೆದ ಕೆಲವು ವರ್ಷಗಳಲ್ಲಿ, ಜಗತ್ತು ಒಂದರ ನಂತರ ಒಂದರಂತೆ ಬಿಕ್ಕಟ್ಟುಗಳನ್ನು ಎದುರಿಸಿದೆ.
- ಇಂದು ಜಗತ್ತಿಗೆ ಶಾಂತಿ, ಸ್ಥಿರತೆ ಮತ್ತು ಮುನ್ಸೂಚನೆ ನೀಡಬಲ್ಲ ಪರಿಸ್ಥಿತಿಯ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.
- ಭಾರತ ಮತ್ತು ಆಸಿಯಾನ್ ಒಟ್ಟಾಗಿ ವಿಶ್ವದ ಜನಸಂಖ್ಯೆಯ ಸುಮಾರು ಕಾಲು ಭಾಗವನ್ನು ಪ್ರತಿನಿಧಿಸುತ್ತವೆ. ಆದ್ದರಿಂದ, ಇವುಗಳ ಭವಿಷ್ಯವು ಸ್ಪರ್ಧೆಯಿಂದಲ್ಲ, ಬದಲಾಗಿ ಸಹಕಾರದಿಂದ ರೂಪುಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು ಮುಖ್ಯವಾಗಿದೆ.

ಸಿನಿಮಾ ನಟರನ್ನು ನೋಡಿ ಯುವ ಜನತೆ ಹಾಳಾಗದಿರಲಿ

ತಂಬಾಕು ಮುಕ್ತ ಯುವ ಅಭಿಯಾನ । ಸಚಿವ ಖಾದರ್ ಹೇಳಿಕೆ

ಬೆಂಗಳೂರು: ಸಿನಿಮಾಗಳಲ್ಲಿ ನಟರು ಸಿಗರೇಟ್ ಹಿಡಿದು ಪೋಸ್ ಕೊಡುವುದನ್ನು ನೋಡಿ ಯುವಜನತೆ ಪ್ರೇರಣೆಗೊಂಡು ದಾರಿ ತಪ್ಪಬಾರದು ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಆಯೋಜಿಸಲಾಗಿದ್ದ ತಂಬಾಕು ಮುಕ್ತ ಯುವ ಅಭಿಯಾನ 4.0 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಯುವಜನತೆಗೆ ಕಿವಿಮಾತು ಹೇಳಿದ ಯು.ಟಿ. ಖಾದರ್, ಟಿವಿ ಮತ್ತು ಸಿನಿಮಾಗಳಲ್ಲಿ ನಟರು ಕೇವಲ ಸಿಗರೇಟ್ ಹಿಡಿದು–ಕೊಂಡು ಪೋಸ್ ಕೊಡುತ್ತಾರೆ. ಅದನ್ನು ನೋಡಿ ಯುವಜನತೆ ಹಾಳಾಗಬೇಡಿ. ನಟರು ತೆರೆಯ ಮೇಲೆ ಪೋಸ್ ಕೊಟ್ಟರು ಅಂತ ನೀವು ಸಿಗರೇಟ್ ಸೇದಲು ಶುರು ಮಾಡಿದರೆ, ಮುಂದೆ ನೀವು ಆಸ್ಪತ್ರೆಯ ಐಸಿಯು (ಖಅಆ) ಸೇರಬೇಕಾಗುತ್ತದೆ. ಅಂತಹ ದುಶ್ಚಟಗಳ ವಿಚಾರದಲ್ಲಿ ಸಿನಿಮಾ ನಟರನ್ನು ಎಂದಿಗೂ ಮಾದರಿಯಾಗಿ ತೆಗೆದುಕೊಳ್ಳಬೇಡಿ" ಎಂದು ಎಚ್ಚರಿಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ ಅವರು, ನಾನು ಯಾವುದೇ ನಿರ್ದಿಷ್ಟ ಸಿನಿಮಾ ನಟರ ಬಗ್ಗೆ ಮಾತನಾಡಿಲ್ಲ. ಇಲ್ಲಿನ ಯಾವ ನಟರೂ ಆ ರೀತಿ ಮಾಡುತ್ತಿಲ್ಲ, ಕಾಣಿಸುತ್ತಲೂ ಇಲ್ಲ. ಆದರೆ, ಹಿಂದಿ ಅಥವಾ ಇಂಗ್ಲಿಷ್ ಸಿನಿಮಾಗಳು, ನಾಟಕ ಹಾಗೂ ಇತರ ಮಾಧ್ಯಮಗಳಲ್ಲಿ ಕೆಲವೊಮ್ಮೆ ಸೆಲೆಬ್ರಿಟಿಗಳು ತಂಬಾಕು ಬಳಸುವ ದೃಶ್ಯಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಯುವಜನತೆ ಅದನ್ನೇ ಸ್ಫೂರ್ತಿಯಾಗಿ ತೆಗೆದುಕೊಂಡು, ಅದು ಅಭ್ಯಾಸವಾಗಿ ಆಸ್ಪತ್ರೆ ಸೇರಿದರೆ ಅವರ ಕುಟುಂಬಕ್ಕೆ ಯಾರು ದಿಕ್ಕಾಗುತ್ತಾರೆ? ಸೆಲೆಬ್ರಿಟಿಗಳ ಪ್ರಭಾವದಿಂದ ಯುವಕರು ಹಾಳಾಗಬಾರದು ಎಂಬುದಷ್ಟೇ ನನ್ನ ಕಾಳಜಿ ಎಂದು ಸ್ಪಷ್ಟಪಡಿಸಿದರು.

ಐಟಿ–ಬಿಟಿ ಕಂಪನಿಗಳಲ್ಲಿ ಸ್ಮೋಕಿಂಗ್ ಝೋನ್‌ಗಳಿಗೆ ಕಡಿವಾಣ ಹಾಕುವ ಕುರಿತು ಪ್ರತಿಕ್ರಿಯಿಸಿದ ಅವರು, ಎಷ್ಟೇ ಜಾಗೃತಿ ಮೂಡಿಸಿದರೂ ಕೆಲವರು ಹಳೆಯ ಅಭ್ಯಾಸದಿಂದ ಧೂಮಪಾನ ಮಾಡುತ್ತಿರುತ್ತಾರೆ. ಲಕ್ಷಾಂತರ ಉದ್ಯೋಗಿಗಳು ಇರುವ ಕಡೆ ಸಂಪೂರ್ಣ ನಿಯಂತ್ರಣ ಕಷ್ಟವಾಗುತ್ತದೆ ಎಂಬ ಕಾರಣಕ್ಕೆ ಪ್ರತೆ–ೃೇಕ ಝೋನ್ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಆದರೂ ಸ್ಮೋಕಿಂಗ್ ಝೋನ್‌ಗಳಿಗೆ ಕಡಿವಾಣ ಹಾಕುವ ಬಗ್ಗೆ ಸಲಹೆ ಬಂದಿದ್ದು, ಈ ಕುರಿತು ಪರಿಶೀಲಿಸಲಾಗುವುದು ಎಂದರು.

ಐಪಿಎಲ್‌ಗೆ ನಿವೃತ್ತಿ ಘೋಷಿಸಿದ ಎಂ.ಎಸ್. ಧೋನಿ

ಚೆನ್ನೈ: ಐಪಿಎಲ್ ಕ್ರಿಕೆಟ್‌ಗೆ ಮಹೇಂದ್ರ ಸಿಂಗ್ ಧೋನಿ ನಿವೃತ್ತಿ ಘೋಷಿಸಿದ್ದಾರೆ. ಧೋನಿ ಪ್ರಸ್ತುತ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡುತ್ತಿದ್ದರು. ಅವರ ಈ ನಿರ್ಧಾರ ಅಭಿಮಾನಿಗಳ ಬೇಸರಕ್ಕೆ ಕಾರಣವಾಗಿದೆ. ಆದರೆ ಧೋನಿ ಮುಂದೆ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಐಪಿಎಲ್ 2027ಕ್ಕಿಂತ ಮೊದಲು, ಫ್ರಾಂಚೈಸಿ ಧೋನಿಯನ್ನು ತಂಡದ ಮಾರ್ಗದರ್ಶಕರನ್ನಾಗಿ ನೇಮಿಸಿದೆ. ಸಿಎಸ್‌ಕೆ ಇದನ್ನು ಅಧಿಕೃತವಾಗಿ ದೃಢಪಡಿಸಿದೆ.

ಚೆನ್ನೈ ಸೂಪರ್ ಕಿಂಗ್ಸ್ ತಮ್ಮ ಪ್ರಕಟಣೆಯಲ್ಲಿ ಧೋನಿ ಈ ಹೊಸ ಪಾತ್ರದೊಂದಿಗೆ ಹೊಸ ಅಧ್ಯಾಯವನ್ನು ಪ್ರಾರಂಭಿಸುತ್ತಾರೆ. ಇದರರ್ಥ ಅವರು ಇನ್ನು ಮುಂದೆ ಆಟಗಾರನಾಗಿ ಕಣಕ್ಕಿಳಿಯುವುದಿಲ್ಲ, ಬದಲಾಗಿ ತಂಡಕ್ಕೆ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಾರೆ.

ಧೋನಿ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಬಹಳ ವಿಶೇಷ ಸಂಬಂಧವನ್ನು ಹೊಂದಿವೆ. ಅವರ ನಾಯಕತ್ವದಲ್ಲಿ ತಂಡವು ಅನೇಕ ಸ್ಮರಣೀಯ ಯಶಸ್ಸನ್ನು ಸಾಧಿಸಿದೆ. ಈಗ ಐಪಿಎಲ್ 2027ರಲ್ಲಿ ಧೋನಿಯ ಪಾತ್ರ ಬದಲಾಗುತ್ತದೆ. ಅವರು ತಂಡದ ಆಟಗಾರರು ಮತ್ತು ಫ್ರಾಂಚೈಸಿಯೊಂದಿಗೆ ಮಾರ್ಗದರ್ಶಕರಾಗಿ ಸೇರುತ್ತಾರೆ. ಫ್ರಾಂಚೈಸಿಯ ಮಾಲೀಕರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಈ ಸಂದರ್ಭದಲ್ಲಿ ಧೋನಿಯ ಕೊಡುಗೆಗಳನ್ನು ನೆನಪಿಸಿಕೊಳ್ಳುತ್ತಾ ಭಾವನಾತ್ಮಕ ಹೇಳಿಕೆಗಳನ್ನು ನೀಡಿದರು. ಧೋನಿ ಆಗಸ್ಟ್ 15, 2020 ರಂದು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದರು.

ಐಪಿಎಲ್ ಕ್ಯಾಪ್ಟನ್ ಕೂಲ್ ವಿದಾಯ



ದತ್ತು ಪುತ್ರನಿಗೆ ಬೀಳ್ಕೊಡುವ ಅವಕಾಶ ಸಿಕ್ಕಿದ್ದರೆ ಚೆನ್ನಾಗಿತ್ತು

ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡದಿಂದ ಮಾಜಿ ಕ್ಯಾಪ್ಟನ್ ಎಂ.ಎಸ್. ಧೋನಿ ಅವರು ಮಂಗಳವಾರ ಐಪಿಎಲ್‌ಗೂ ನಿವೃತ್ತಿ ಘೋಷಿಸಿದ್ದು, ಅವರಿಗೆ ಸಲ್ಲಬೇಕಿದ್ದ ಬೀಳ್ಕೊಡುಗೆಯನ್ನು ನೀಡಲು ನಮಗೆ ಅವಕಾಶ ಸಿಕ್ಕಿದ್ದರೆ ಚೆನ್ನಾಗಿತ್ತು ಎಂದು ತಮಿಳುನಾಡು ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರು ಭಾವುಕವಾಗಿ ಪೋಸ್ಟ್ ಮಾಡಿದ್ದಾರೆ.

ಧೋನಿ ಚೆನ್ನೈಗೆ ಐಪಿಎಲ್ ಟ್ರೋಫಿಗಳಿಗಿಂತಲೂ ಹೆಚ್ಚಿನದನ್ನು ನೀಡಿದ್ದಾರೆ. ಅವರು ನಮಗೆ ತಲಮಾರುಗಳನ್ನು ಒಂದುಗೂಡಿಸುವ ಭಾವನೆಯನ್ನು ನೀಡಿದ್ದಾರೆ. ಅದು ಕ್ರಿಕೆಟ್‌ನ ಗಡಿಗಳನ್ನು ಮೀರಿದ ಬಾಂಧವ್ಯವನ್ನು ಬೆಸೆಯಿತು ಎಂದು ಎಂ.ಕೆ. ಸ್ಟಾಲಿನ್ ಅವರು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ. ಪ್ರತಿಯೊಂದು ಒಳ್ಳೆಯ ವಿಷಯಕ್ಕೂ ಒಂದು ಅಂತ್ಯವಿರುತ್ತದೆ. ತಮಿಳುನಾಡಿನ ಪ್ರೀತಿಯ 'ದತ್ತು ಪುತ್ರ'ನಿಗೆ, ಅವರಿಗೆ ನಿಜವಾಗಿಯೂ ನೀಡಬೇಕಾಗಿದ್ದ ಬೀಳ್ಕೊಡುಗೆಯನ್ನು ನೀಡಲು ನಮಗೆ ಇನ್ನೊಂದು ಕೊನೆಯ ಅವಕಾಶ ಸಿಕ್ಕಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಮಾಜಿ ಸಿಎಂ ಪೋಸ್ಟ್ ಮಾಡಿದ್ದಾರೆ. ನಮಗೆ ಅಸಂಖ್ಯಾತ ಸಂತೋಷದ ಕ್ಷಣಗಳನ್ನು, ಅದ್ಭುತವಾದ ವಿಜಯಗಳು ಮತ್ತು ನೆನಪುಗಳನ್ನು ನೀಡಿದ್ದಕ್ಕಾಗಿ ಧನ್ಯವಾದ. ಈಗ ಸಿಎಸ್‌ಕೆ ಮಾರ್ಗದರ್ಶಕರಾಗಿ ನಿಮ್ಮ ಹೊಸ ಇನ್ನಿಂಗ್ಸ್ ಉತ್ತಮವಾಗಿರಲಿ ಎಂದು ಹಾರೈಸುತ್ತೇನೆಂದು ಸ್ಟಾಲಿನ್ ಹೇಳಿದ್ದಾರೆ. ಕ್ಯಾಪ್ಟನ್ ಕೂಲ್ ಎಂದೇ ಖ್ಯಾತಿ ಗಳಿಸಿದ್ದ ಧೋನಿ, ಜಾರ್ಖಂಡ್‌ನ ರಾಂಚಿ ಮೂಲದವರಾಗಿದ್ದರೂ, ಸಿಎಸ್‌ಕೆ ತಂಡದ ನಾಯಕತ್ವ ವಹಿಸಿಕೊಂಡ ದಿನದಿಂದ ತಮಿಳುನಾಡಿನ ಜನ ಧೋನಿಯನ್ನು ತಮ್ಮೂರಿನ, ತಮ್ಮ ಮನೆಯ ಮಗನೆಂದೇ ಭಾವಿಸಿ ಪ್ರೋತ್ಸಾಹಿಸಿದರು. ಈದೀಗ ಎಂ.ಎಸ್. ಧೋನಿ ವಿದಾಯದ ಸುದ್ದಿ ಹೊರ ಬೀಳುತ್ತಿದ್ದಂತೆ ಅವರ ಅಭಿಮಾನಿಗಳು ಮತ್ತು ಆಪ್ತರು ಭಾವುಕ ನುಡಿಗಳನ್ನು ಹಂಚಿಕೊಳ್ಳುತ್ತಿದ್ದಾರೆ.

ಫ್ರೀಡಂಪಾರ್ಕ್‌ನಲ್ಲಿ ಆಶಾ ಕಾರ್ಯಕರ್ತೆಯರ ಅನಿರ್ದಿಷ್ಟಾವಧಿ ಪ್ರತಿಭಟನೆ

ಬೆಂಗಳೂರು: ತಮ್ಮ ಮಾಸಿಕ ಗೌರವಧನವನ್ನು 15,000 ರೂಗಳಿಗೆ ನಿಗದಿಪಡಿಸಬೇಕೆಂದು ಒತ್ತಾಯಿಸಿ ಸಹಸ್ರಾರು ಆಶಾ ಕಾರ್ಯಕರ್ತೆಯರು ಮಂಗಳವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಹಗಲು–ರಾತ್ರಿ ಪ್ರತಿಭಟನೆಯನ್ನು ಆರಂಭಿಸಿದ್ದಾರೆ. ಸದ್ಯ ಇವರಿಗೆ ತಿಂಗಳಿಗೆ 5,000 ರೂಪಾಯಿ ಗೌರವಧನ ನೀಡಲಾಗುತ್ತಿದೆ.'ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ' ಈ ಪ್ರತಿಭಟನೆಯನ್ನು ಆಯೋಜಿಸಿದೆ.

'ಂಘದ ರಾಜ್ಯಾಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ ಮಾತನಾಡಿ, ಸರ್ಕಾರವು ವೇತನ ಹೆಚ್ಚಿಸುವ ಬದಲು ಆಶಾ ಕಾರ್ಯಕರ್ತೆಯರನ್ನು "ಮನೆಗೆ ಕಳುಹಿಸಲು" (ಕೆಲಸದಿಂದ ತೆಗೆದುಹಾಕಲು) ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಮತ್ತು ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಈ ವಿಷಯದಲ್ಲಿ ಒಂದೇ ರೀತಿಯಾಗಿವೆ. ಕೇಂದ್ರ ಸರ್ಕಾರ ಘೋಷಿಸಿದ್ದ 1,500 ರೂಪಾಯಿ ಹೆಚ್ಚಳವನ್ನೂ ಇನ್ನೂ ಜಾರಿಗೊಳಿಸಿಲ್ಲ ಎಂದು ತಿಳಿಸಿದರು.

ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಮಾತನಾಡಿ, ಸರ್ಕಾರವು ತಿಂಗಳಿಗೆ 10,000 ರೂಪಾಯಿ ನೀಡುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ, ಆಶಾ ಕಾರ್ಯಕರ್ತೆಯರು 2025ರ ಜನವರಿಯಲ್ಲಿ ನಡೆಸಲು



ಉದ್ದೇಶಿಸಿದ್ದ ಪ್ರತಿಭಟನೆಯನ್ನು ಸದುದ್ದೇಶದಿಂದ ಕೈಬಿಟ್ಟಿದ್ದರು. "ಆದರೆ ಇಂದಿಗೂ ಆ ಭರವಸೆ ಈಡೇರಿಲ್ಲ. ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು 10,000 ದಿಂದ 12,000 ರೂಪಾಯಿಗಳವರೆಗೆ ಗೌರವಧನ ನೀಡುತ್ತಿರುವಾಗ, ಕರ್ನಾಟಕಕ್ಕೆ ಯಾ–ಕೆ ಸಾಧ್ಯವಿಲ್ಲ ಎಂದು ಅವರು ಪ್ರಶ್ನಿಸಿದರು. ಲೇಖಕ ಹಾಗೂ ಹೋರಾಟಗಾರ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 10,000 ರೂಪಾಯಿ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಅದನ್ನು ಈಡೇರಿಸದಿರುವುದು "ನಾಚಿಕೆಗೇಡಿನ ಸಂಗತಿ" ಎಂದು ಟೀಕಿಸಿದರು. ಈ ಭರವಸೆಯನ್ನು ಈಡೇರಿಸುವಂತೆ ಹಾಲಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ಒತ್ತಾಯಿಸಿದರು.

ನಮ್ಮ ಜಮೀನುಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಗೆ ನಾವು 10,000 ರೂಪಾಯಿ ಕೂಲಿ ನೀಡುತ್ತೇವೆ. ಒಬ್ಬ ವ್ಯಕ್ತಿಯೇ ಇಷ್ಟು ನೀಡಲು ಸಾಧ್ಯವಿರುವಾಗ, ಸರ್ಕಾರ ಯಾಕೆ ನೀಡಲು ಸಾಧ್ಯವಿಲ್ಲ ಎಂದು ಅವರು ಪ್ರಶ್ನಿಸಿದರು. ನಿವೃತ್ತ ಕನ್ನಡ ಪ್ರಾಧ್ಯಾಪಕಿ ಲತಾ ಮೈಸೂರು ಮಾತನಾಡಿ, ಪ್ರಸ್ತುತ ನೀಡುತ್ತಿರುವ ಗೌರವಧನವು ಸರ್ಕಾರಿ ಅಧಿಕಾರಿಗಳು ಒಂದು ಬಾರಿ ಚಹಾ ಮತ್ತು ಬಿಸ್ಕತ್ತುಗಳಿಗೆ ಖರ್ಚು ಮಾಡುವ ಹಣಕ್ಕಿಂತಲೂ ಕಡಿಮೆ ಇದೆ ಎಂದು ಹೇಳಿದರು.

ಹಂಪಿ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಎ. ಮುರಿಗೆಪ್ಪ, ಚಿಲ್ಲರೆ ಅಂಗಡಿಗಳಲ್ಲಿ ಕೆಲಸ ಮಾಡುವ ಮಾರಾಟಗಾರರು ಕೂಡ ಆಶಾ ಕಾರ್ಯಕರ್ತೆ–ರ್ಯರಿಗಿಂತ ಹೆಚ್ಚು ಗಳಿಸುತ್ತಾರೆ ಎಂದು ತಿಳಿಸಿದರು. ಅಲ್ಲದೆ, ಹಣದುಬ್ಬರಕ್ಕೆ ಅನುಗುಣವಾಗಿ ಪ್ರತಿ ವರ್ಷ ಗೌರವಧನವನ್ನು ಹೆಚ್ಚಿಸಬೇಕೆಂದು ಅವರು ಆಗ್ರಹಿಸಿದರು.

ಆಶಾ ಕಾರ್ಯಕರ್ತೆಯರ ಪ್ರಮುಖ ಬೇಡಿಕೆಗಳು ಏನು?

- ಮಾಸಿಕ 15,000 ನಿಗದಿತ ಗೌರವಧನ
- ಮೊಬೈಲ್ ಆಪ್ ಆಧಾರಿತ ಕಡ್ಡಾಯ ಕೆಲಸವನ್ನು ಕೈಬಿಡುವುದು, ಅಥವಾ ನಿಗದಿತ ಪ್ರೋತ್ಸಾಹಧನದೊಂದಿಗೆ ಮೊಬೈಲ್ ಫೋನ್‌ಗಳನ್ನು ಒದಗಿಸುವುದು
- ಬಾಕಿ ಉಳಿದಿರುವ ನಿವೃತ್ತಿ ನಂತರದ ಸೌಲಭ್ಯಗಳನ್ನು ಪಾವತಿಸುವುದು
- ಬಾಕಿ ಇರುವ ಕೇಂದ್ರ ಸರ್ಕಾರದ ಪ್ರೋತ್ಸಾಹಧನಗಳನ್ನು ಬಿಡುಗಡೆ ಮಾಡುವುದು
- 2025ರ ಫೆಬ್ರವರಿ 25ರಂದು ಸೇವೆಯಿಂದ ತೆಗೆದುಹಾಕಲಾದ ಆಶಾ ಕಾರ

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

ಹಾನಗಲ್ ತಾಲೂಕಿನ ಕೂಸನೂರಲ್ಲಿ 3 ಅಪರೂಪದ ದಾನ ಶಾಸನಗಳ ಪತ್ತೆ!

12ನೇ ಶತಮಾನದ ದೇವಗಿರಿ ಯಾದವರ ಕಾಲದ ಶಾಸನ ಪತ್ತೆ । ಪ್ರಾಚೀನ ಇತಿಹಾಸದ ಮೇಲೆ ಹೊಸ ಬೆಳಕು

ಹಾವೇರಿ: ಜಿಲ್ಲೆಯ ಹಾನಗಲ್ ತಾಲೂಕಿನ ಐತಿಹಾಸಿಕ ಕೂಸನೂರ(ಕೂಸಲೂರು)ಗ್ರಾಮದಲ್ಲಿಮೂರುಅಪರೂಪದ ದಾನ ಶಾಸನಗಳು ಪತ್ತೆಯಾಗಿದ್ದು, ಗ್ರಾಮದ ಪ್ರಾಚೀನ ಇತಿಹಾಸ, ಧಾರ್ಮಿಕ ಪರಂಪರೆ ಹಾಗೂ ದಾನಧರ್ಮದ ಆಚರಣೆಗಳ ಕುರಿತು ಮಹತ್ವದ ಐತಿಹಾಸಿಕ ಮಾಹಿತಿ ಬೆಳಕಿಗೆ ಬಂದಿದೆ.

ರಟ್ಟಿಹಳ್ಳಿಯ ಪ್ರಿಯದರ್ಶಿನಿ ಪ್ರಥಮ ದರ್ಜೆಯ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಚಾಮರಾಜ ಕಮ್ಮಾರ ಅವರು ಕ್ಷೇತ್ರಕಾರ್ಯಕ್ಕಾಗಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಶಾಸನೋಕ್ತ ಕೂಸಲೂರು ಗ್ರಾಮದ ಹಿರೇಕೆರೆಯ ಕೆಳಭಾಗದಲ್ಲಿರುವ ಗದ್ದೆಗಳಲ್ಲಿ ಈ ಮೂರು ಶಾಸನಗಳನ್ನು ಪತ್ತೆಹಚ್ಚಿದ್ದಾರೆ.

12ನೇ ಶತಮಾನದ ದಾನ ಶಾಸನ: ಸುಮಾರು 12ನೇ ಶತಮಾನದ ಕೊನೆಯ ಘಟ್ಟದ ದೇವಗಿರಿ ಯಾದವರ ಕಾಲಕ್ಕೆ ಸೇರಿದ ಈ ಶಾಸನವು ಒಂಬತ್ತು ಸಾಲುಗಳನ್ನು ಒಳಗೊಂಡಿದೆ. ಶಾಸನದಲ್ಲಿ ಸಮಸ್ತಗಣ ಸ್ಥಾಪಕ ಬಲಗಿದೇವ ಜಾಡ್ಯಲನು, ಗ್ರಾಮದ ಪ್ರಭು ಕನಗೌಡ ಹಾಗೂ ಊರಿನ ಸಮಸ್ತ ಪ್ರಜೆಗಳು ರಾಮನಾಥ ದೇವರ ಚಪ್ಪರಕ್ಕೆ ಒಂದು ಕೆಯ್ ಗದ್ದೆಯನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಶಾಸನದ ಮೇಲ್ಭಾಗದಲ್ಲಿ ಗೋವಿನ ರೇಖಾಚಿತ್ರ ಹಾಗೂ ಎದುರಿಗೆ ಖಡ್ಗದ ಚಿತ್ರವಿದೆ.

ಶೈವ ಪರಂಪರೆಯ ಎರಡನೇ ಶಾಸನ: ಮೊದಲ ಶಾಸನದಿಂದ ಸ್ವಲ್ಪ ದೂರದಲ್ಲಿ ಪಾಲಾಕ್ಷಪ್ಪ ಸುರಳೇಶ್ವರ ಅವರ ಹೊಲದ ಬದುವಿನಲ್ಲಿ ಮತ್ತೊಂದು ಶಾಸನ ಪತ್ತೆಯಾಗಿದೆ. ಏಳು ಸಾಲುಗಳನ್ನು ಹೊಂದಿರುವ ಈ ಶಾಸನವು ಶೈವ ಪರಂಪರೆಗೆ ಸಂಬಂಧಿಸಿದ್ದಾಗಿದೆ. ಶಾಸನದ ಮೇಲ್ಭಾಗದಲ್ಲಿ ಲಿಂಗದ ರೇಖಾಚಿತ್ರದೊಂದಿಗೆ ಸೂರ್ಯ ಮತ್ತು ಚಂದ್ರರ ಚಿತ್ರಗಳಿವೆ. ಜಕ್ಕರಸ, ಮಾದರಸ, ಸಂಕನಗೌಡ ಹಾಗೂ ಗ್ರಾಮದ ಪ್ರಜೆಗಳು ಸೇರಿ ಸಮೀಪದ ರಾಮಲಿಂಗೇಶ್ವರ ದೇವಸ್ಥಾನದ ಪೂಜೆ ಮತ್ತು ಅರ್ಚನೆಗಾಗಿ ಹೂದೋಟಕ್ಕೆ ಗದ್ದೆ ಹಾಗೂ ಮೂರು ಕಂಬ ಅಳತೆಯ ಗದ್ದೆಯನ್ನ ದಾನವಾಗಿ ನೀಡಿರುವುದನ್ನು ಶಾಸನ



ವಿವರಿಸುತ್ತದೆ. ಈ ದಾನದ ಉಲ್ಲೇಖವು ಅಂದಿನ ಕಾಲದಲ್ಲಿ ದೇವಸ್ಥಾನಗಳ ನಿರ್ವಹಣೆಗಾಗಿ ಗ್ರಾಮಸ್ಥರು ಸಂಘಟಿತವಾಗಿ ದಾನಧರ್ಮ ಮಾಡುತ್ತಿದ್ದ ಪರಂಪರೆಯನ್ನು ತಿಳಿಸುತ್ತದೆ.

ವೈಷ್ಣವ ಪರಂಪರೆಯ ಮೂರನೇ ಶಾಸನ

ಈ ಎರಡು ಶಾಸನಗಳಿಂದ ಸುಮಾರು ನೂರು ಮೀಟರ್ ದೂರದಲ್ಲಿರುವ ನಿಂಗಪ್ಪ ಬಿಳೆಕಸದ ಅವರ ತೋಟದ ಬದುವಿನಲ್ಲಿ, ಮೂರನೇ ಶಾಸನ ಪತ್ತೆಯಾಗಿದೆ. ಸುಮಾರು ಒಂಬತ್ತು ಸಾಲುಗಳನ್ನು ಹೊಂದಿರುವ ಈ ಶಾಸನವು ಅಸ್ಪಷ್ಟವಾಗಿದ್ದರೂ, ದುಂದುಭಿ ಸಂವತ್ಸರದ ಜೇಷ್ಠ ಶುದ್ಧ ಬಹುಳ ಎಂಬ ಕಾಲದ ಉಲ್ಲೇಖ ಕಂಡುಬಂದಿದೆ.

ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಹಾಗೂ ಶಂಖ-ಚಕ್ರಗಳ ರೇಖಾಚಿತ್ರಗಳಿದ್ದು, ಇದು ವೈಷ್ಣವ ಪರಂಪರೆಗೆ ಸೇರಿದ ಶಾಸನವಾಗಿರಬಹುದು ಎಂದು ತಿಳಿದುಬಂದಿದೆ.

ಐತಿಹಾಸಿಕ ಸ್ಮಾರಕಗಳ ನೆಲೆ ಕೂಸನೂರು: ಕೂಸನೂರ ಗ್ರಾಮವು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಗ್ರಾಮದ ಆಂಜನೇಯ ದೇವಸ್ಥಾನದ ಸಮೀಪ ರಾಷ್ಟ್ರಕೂಟರ ಕಾಲದ ಸುಮಾರು ಆರು ಅಡಿ ಎತ್ತರದ ವೀರಗಲ್ಲು, ಕಲ್ಯಾಣ ಚಾಲುಕ್ಯರ ಕಾಲದ ಎರಡು ತುಂಡಾದ ವೀರಗಲ್ಲುಗಳು ಹಾಗೂ ಮೂರು ಮಾಸ್ತಿಕಲ್ಲುಗಳಿವೆ.

ಇನ್ನು ರಾಮಲಿಂಗೇಶ್ವರ ದೇವಸ್ಥಾನದ ಸಮೀಪ ಮಹಾಸತಿ ಶಿಲ್ಪ, ತುಂಡಾದ ವೀರಗಲ್ಲು ಹಾಗೂ ನಂದಿ ವಿಗ್ರಹಗಳು ಕಂಡುಬರುತ್ತವೆ. ಇವೆಲ್ಲವೂ ಗ್ರಾಮದ ಪ್ರಾಚೀನ ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೆ ಸಾಕ್ಷಿಯಾಗಿವೆ.

ಕನ್ನೇಶ್ವರ ದೇವಾಲಯಕ್ಕೂ ಕೂಸಲೂರಿಗೂ ಐತಿಹಾಸಿಕ ನಂಟು

ಕೂಸಲೂರನ್ನು ಆಳುತ್ತಿದ್ದ ಗಂಗರ ಕನ್ನಮಯ್ಯ ಗಾಮುಂಡನು ಕನ್ನೇಶ್ವರ ದೇವಾಲಯದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ್ದನು. ನಂತರ ಚೌಡ ಹಾಗೂ ಆತನ ಮಗ ಬೊಪ್ಪನು ದೇವಾಲಯದ ನಿರ್ಮಾಣವನ್ನು ಪೂರ್ಣಗೊಳಿಸಿದ ಬಗ್ಗೆ ಕನ್ನೇಶ್ವರದ ಶಕವರ್ಷ 925 ಮತ್ತು ಚಾಲುಕ್ಯ ವಿಕ್ರಮ ವರ್ಷದ 9ನೇ ಕ್ರೋಧನ ಸಂವತ್ಸರದ ಶಾಸನಗಳಲ್ಲಿ ಮಾಹಿತಿ ಲಭ್ಯವಾಗಿದೆ. ಒಟ್ಟಿನಲ್ಲಿ, ಕೂಸನೂರಿನಲ್ಲಿ ಪತ್ತೆಯಾಗಿರುವ ಈ ಮೂರು ದಾನ ಶಾಸನಗಳು ಗ್ರಾಮದ ಇತಿಹಾಸದ ಹೊಸ ಅಧ್ಯಾಯವನ್ನು ತೆರೆದಿಟ್ಟಿವೆ. ಶೈವ, ವೈಷ್ಣವ ಹಾಗೂ ಇತರ ಧಾರ್ಮಿಕ ಪರಂಪರೆಗಳ ಸಹಬಾಳ್ವೆ, ದೇವಸ್ಥಾನಗಳ ನಿರ್ವಹಣೆ ಮತ್ತು ಅಂದಿನ ದಾನಧರ್ಮದ ಪದ್ಧತಿಗಳ ಕುರಿತು ಅಧ್ಯಯನಕ್ಕೆ ಈ ಶಾಸನಗಳು ಮಹತ್ವದ ಆಕರಗಳಾಗಿವೆ. ಕ್ಷೇತ್ರ ಕಾರ್ಯದಲ್ಲಿ ಬಂಕಾಪುರ ಇತಿಹಾಸ ಉಪನ್ಯಾಸಕ ಡಾ.ರಾಜೇಶ ಎಸ್.ಸೂಡಂಬಿ ಸಹಕಾರ ನೀಡಿದ್ದಾರೆ.

ರಸ್ತೆ ಬದಿಯ ಮನೆಗಳಿಗೆ ಲಾರಿ ಡಿಕ್ಕಿ; ತಪ್ಪಿದ ಭಾರೀ ಅನಾಹುತ

ನವಲಗುಂದ: ಹುಬ್ಬಳ್ಳಿ ಕಡೆಗೆ ಹೊರಟಿದ್ದ ಸಿಮೆಂಟ್ ತುಂಬಿದ KA-01-AH-7537 ನೋಂದಣಿ ಸಂಖ್ಯೆಯ ಲಾರಿಯೊಂದು ಸೋಮವಾರ ತಡರಾತ್ರಿ ಸುಮಾರು 12.45ರ ವೇಳೆಗೆ ರಸ್ತೆ ಬದಿಯಲ್ಲಿದ್ದ ಗೋವಿಂದ ಕಲಕೇರಿ ಹಾಗೂ ಶಿವಲೀಲಾ ಸಿಕ್ಕೇರಿ ಮಠ ಅವರಿಗೆ ಸೇರಿದ ಮನೆಗಳ ಕಾಂಪೌಂಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮನೆಗಳಿಗೆ ಹಾಗೂ ಮನೆಗಳ ಮುಂಭಾಗದಲ್ಲಿದ್ದ ವಸ್ತುಗಳಿಗೆ ಹಾನಿಯಾದ ಘಟನೆ ನಡೆದಿದೆ.

ಲಾರಿ ಡಿಕ್ಕಿಯ ರಭಸಕ್ಕೆ ಪಕ್ಕದಲ್ಲಿದ್ದ ವಿದ್ಯುತ್ ಕಂಬ ಸಂಪೂರ್ಣವಾಗಿ ಮುರಿದು ಬಿದ್ದಿದೆ. ಲಾರಿ ನಿಯಂತ್ರಣ ತಪ್ಪಿ ಒಂದು ಬದಿಗೆ ವಾಲಿಕೊಂಡು ಅಪಾಯಕರ ಸ್ಥಿತಿಯಲ್ಲಿನಿಂತಿದೆ. ಘಟನೆಯಿಂದ ಎರಡೂ ಮನೆಗಳ ಕಾಂಪೌಂಡ್‌ಗಳು ಹಾಗೂ ಮನೆಯ ಮುಂಭಾಗದಲ್ಲಿದ್ದ ವಸ್ತುಗಳು ಜಖಂಗೊಂಡಿವೆ.

ಅಪಘಾತ ಸಂಭವಿಸಿದ ಬಳಿಕ ಲಾರಿ ಚಾಲಕ ಲಾರಿಯನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿದ್ದಾನೆ ಎನ್ನಲಾಗಿದೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ತಡರಾತ್ರಿ ಘಟನೆ ನಡೆದಿದ್ದರಿಂದ ಮನೆಗಳ ನಿವಾಸಿಗಳು ಆತಂಕಕ್ಕೊಳಗಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಾನಿಯ ಪರಿಶೀಲನೆ ನಡೆಸಿ ತನಿಖೆ ನಡೆಸಿದ್ದಾರೆ.



ವಿದ್ಯಾರ್ಥಿಗಳ ಸುಪ್ತ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆ: ಶಾಸಕ ಯು.ಬಿ. ಬಣಕಾರ

ಸಮಾಲೋಚನೆ ಸುದ್ದಿ ಬ್ಯಾಡಗಿ

ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿ ಅವರ ಸೃಜನಶೀಲತೆ, ಕಲಾತ್ಮಕ ಅಭಿವ್ಯಕ್ತಿ ಹಾಗೂ ಆತ್ಮವಿಶ್ವಾಸವನ್ನು ಬೆಳೆಸು ವ ನಿಟ್ಟಿನಲ್ಲಿ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳು ಅತ್ಯವಶ್ಯಕವಾಗಿವೆ ಎಂದು ಹಿರೇಕೆರೂರು ವಿಧಾನಸಭಾ ಕ್ಷೇತ್ರದ ಶಾ ಸಕ ಯು.ಬಿ. ಬಣಕಾರ ಅಭಿಪ್ರಾಯಪಟ್ಟರು.

ಪಟ್ಟಣದ ಹೈಬರ್ಡ್ ಸ್ಟ್ಯಾಂಡರ್ಡ್ ಪಬ್ಲಿಕ್ ಸ್ಕೂಲ್‌ನಲ್ಲಿ ಆಯೋಜಿಸಲಾಗಿದ್ದ 2026-27ನೇ ಸಾಲಿನ ಹಂಸಭಾವಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಭಾ ಕಾರಂಜಿಯಂತಹ ವೇದಿಕೆಗಳು ಮಕ್ಕಳಲ್ಲಿರುವ ವಿವಿಧ ಪ್ರತಿಭೆಗಳನ್ನು ಗುರುತಿಸಿ ಅನಾವರಣಗೊಳಿಸಲು ಉತ್ತಮ ಅವಕಾಶ ಕಲ್ಪಿಸುತ್ತವೆ. ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ, ಆತ್ಮವಿಶ್ವಾಸ ಹಾಗೂ ಸಾಂಸ್ಕೃತಿಕ ಅಭಿರುಚಿ ಬೆಳೆಯುತ್ತದೆ. ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಿದಾಗ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಂ.ಎಸ್.ಪಾಟೀಲ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರುವಲ್ಲಿ ಪ್ರತಿಭಾ ಕಾರಂಜಿ ಮಹತ್ವದ ಪಾತ್ರ ವಹಿಸುತ್ತದೆ. ಗ್ರಾಮೀಣ ಭಾಗದ ಮಕ್ಕಳಿಗೂ ತಮ್ಮಲ್ಲಿರುವ ಕಲಾ ಪ್ರತಿಭೆ, ಭಾಷಾ ಕೌಶಲ್ಯ ಹಾಗೂ ಸೃಜನ ಶೀಲತೆಯನ್ನು ಪ್ರದರ್ಶಿಸಲು ಇಂತಹ ವೇದಿಕೆಗಳು ಸಹಕಾರಿಯಾಗಿವೆ. ವಿದ್ಯಾರ್ಥಿಗಳು ಸೋಲು-ಗೆಲುವನ್ನು ಸಮಾ ನವಾಗಿ ಸ್ವೀಕರಿಸಿ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಬೇಕು ಎಂದು ಹೇಳಿದರು.

2026-27ನೇ ಸಾಲಿನ ಹಂಸಭಾವಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧಿಕಾರಿಗಳಾದ ಎನ್.ಸುರೇಶಕುಮಾರ ಹಾಗೂ ಮಲ್ಲಿಕಾರ್ಜುನ ಬುರಡಿಕಟ್ಟಿ, ಟಿಪಿಇಒ ಎಸ್.ಟಿ. ಲಮಾಣಿ, ಆರ್.ಎ. ದೊಡ್ಡನಿ, ಎಪಿಎಂ ಹಾಗೂ ಶಾಲೆಯ ಮುಖ್ಯಶಿಕ್ಷಕ ಆಸಿಫ್ ನದಾಫ್ ತೊಗಣಸಿ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು, ಶಿಕ್ಷಕಿಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ವಿಶ್ವ ವಿಕಲಚೇತನರ ದಿನಾಚರಣೆ: ಪೂರ್ವಭಾವಿ ಸಭೆ

ಹಾವೇರಿ: ವಿಶ್ವ ವಿಕಲಚೇತನರ ದಿನಾಚರಣೆ ಕುರಿತು ಪೂರ್ವಭಾವಿ ಸಭೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೋಮವಾರ ಜಿಲ್ಲಾಧಿಕಾರಿಗಳ ಕೋರ್ಟಹಾಲ್‌ನಲ್ಲಿ ಜರುಗಿತು.

ವಿಕಲಚೇತನರಿಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಆಯೋಜನೆ, ಆಮಂತ್ರಣ ಪತ್ರಿಕೆ, ಗಣ್ಯರ ಆಹ್ವಾನ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ವಿಕಲಚೇತನರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ತಾಲೂಕು ಸಂಘದ ಪದಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರೆಂದು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಕುಂಟುತ್ತಾ ಸಾಗಿದ ಮುಖ್ಯರಸ್ತೆ ಕಾಮಗಾರಿ: ಚರಂಡಿ ಗುಂಡಿಯಲ್ಲೇ ಮಲಗಿ ವಕೀಲ ಕಿರಣಕುಮಾರ ವಿನೂತನ ಪ್ರತಿಭಟನೆ!

ಸಮಾಲೋಚನೆ ಸುದ್ದಿ ಬ್ಯಾಡಗಿ

ಪಟ್ಟಣದ ಮುಖ್ಯರಸ್ತೆ ಅಗಲೀಕರಣ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವುದನ್ನು ಖಂಡಿಸಿ ಮುಖ್ಯರಸ್ತೆ ಅಗಲೀಕರಣ ಹೋರಾ ಟ ಸಮಿತಿ ಸದಸ್ಯ, ವಕೀಲ ಕಿರಣಕುಮಾರ ಎಂ.ಎಲ್. ಮಂಗಳವಾರ ಚರಂಡಿ ನಿರ್ಮಾಣಕ್ಕಾಗಿ ತೆಗೆದಿದ್ದ ಗುಂಡಿಯಲ್ಲಿ ಪೇಪರ್ ಹಾಸಿಕೊಂಡು ಮಲಗುವ ಮೂಲಕ ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ ವ್ಯಕ್ತಪ ಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ನಮ್ಮ ತಾಲೂಕಿನ ಆಡಳಿತ ವ್ಯವಸ್ಥೆಯೇ ನಿದ್ರಾವಸ್ಥೆಯಲ್ಲಿದೆ. ಕಳೆದ ಆರು ತಿಂಗಳ ಹಿಂದೆಯೇ ಮುಖ್ಯರಸ್ತೆ ಅಗಲೀಕರಣಕ್ಕಾಗಿ ರಸ್ತೆಯ ಇಕ್ಕೆಲಗಳಲ್ಲಿದ್ದ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ. ಅಂದಿನಿಂದ ಇಲ್ಲಿಯವರೆಗೆ ರಸ್ತೆ ನಿರ್ಮಾಣ ಕಾಮಗಾರಿ ಆರಂಭವಾಗಿ ಪೂರ್ಣಗೊಳ್ಳುವ ಹಂತಕ್ಕೆತಲುಪಬೇಕಿತ್ತು.ಆದರೆ,ಇದುವರೆಗೂಶೇ.10ರಷ್ಟು ಕಾಮಗಾರಿಯೂ ಪೂರ್ಣಗೊಂಡಿಲ್ಲ. ಮುಖ್ಯರಸ್ತೆ ನಿರ್ಮಾಣಕಾಮಗಾರಿಯಹೊಣೆಹೊತ್ತಿರುವಎಪಿಎಂಸಿ ಹಾಗೂ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಕಾಮಗಾರಿ ಹಳ್ಳ ಹಿಡಿಯುತ್ತಿದೆ" ಎಂದು ಕಿಡಿಕಾರಿದರು.

ಯುಜಿಡಿ ಮುಕ್ತಾಯದ ಹಂತಕ್ಕೆ:ಕಳೆದ ನಾಲ್ಕೈದು ತಿಂಗಳಿಂದ ನಿಧಾನಗತಿಯಲ್ಲಿ ಸಾಗುತ್ತಿದ್ದ ಯುಜಿಡಿ ಮತ್ತು 24* 7 ಕುಡಿಯುವ ನೀರಿನ ಯೋಜನೆಯ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಇದೀಗ ಮುಕ್ತಾಯದ ಹಂತಕ್ಕೆ ತಲುಪುತ್ತಿದೆ. ಆದರೆ, ಸುಮಾರು ಒಂ ದು ತಿಂಗಳ ಹಿಂದೆ ಆರಂಭವಾದ ಚರಂಡಿ ನಿರ್ಮಾಣ ಕಾಮಗಾರಿ ಮಾತ್ರ ನಿರೀಕ್ಷಿತ ವೇಗ ಪಡೆದುಕೊಂಡಿಲ್ಲ. ಈವರೆಗೂ ಅಂದಾಜು 50 ಮೀಟರ್ ಕಾಮಗಾರಿಯೂ ಪೂರ್ಣಗೊಂಡಿಲ್ಲ ಎಂದರು.

6 ಜನ ಕಾರ್ಮಿಕರು ಮಾತ್ರ:ಚರಂಡಿ ನಿರ್ಮಾಣ ಕಾಮಗಾರಿಯನ್ನುಪರಿಶೀಲಿಸಲುಗುತ್ತಿಗೆದಾರರುಹಾಗೂ ಸಂಬಂಧಪಟ್ಟ ಅಭಿ ಯಂತರರು ಸ್ಥಳಕ್ಕೆ ಬಂದು ಸೂಕ್ತ ಮಾರ್ಗದರ್ಶನ ನೀಡುತ್ತಿಲ್ಲ. ರಸ್ತೆಯ ಎರಡೂ ಬದಿಗಳಲ್ಲಿ ತಲಾ 950 ಮೀಟರ್ ಉದ್ದದ ಚರಂಡಿ ನಿರ್ಮಿಸಬೇಕಿದ್ದು, ಇಷ್ಟೊಂದು ದೊಡ್ಡ ಕಾಮಗಾರಿಗೆ ಗುತ್ತಿಗೆದಾರರು ಕೇವಲ ಆರು ಕಾರ್ಮಿಕರನ್ನು ಮಾತ್ರ ನಿಯೋ ಜಿಸಿದ್ದಾರೆ. ಇದರಿಂದ ದಿನಕ್ಕೆ ಅಂದಾಜು 15ರಿಂದ 20 ಮೀಟರ್‌ನಷ್ಟು ಮಾತ್ರ ಚರಂಡಿ ನಿರ್ಮಾಣವಾಗುತ್ತಿದೆ. ಇಂತಹ ವೇಗ ದಲ್ಲಿ ಕಾಮಗಾರಿ ಯಾವಾಗ ಪೂರ್ಣಗೊಳ್ಳಲಿದೆ ಎಂದು ಪ್ರಶ್ನಿಸಿದರು.

ವಿದ್ಯುತ್ ಕಂಬಗಳ ಸ್ಥಳಾಂತರ ಯಾವಾಗ?:ಮುಖ್ಯರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ವಿದ್ಯುತ್ ಕಂಬಗಳ ಸ್ಥಳಾಂತರ ಕಾರ್ಯ ವೂ ಇನ್ನೂ ಆರಂಭವಾಗಿಲ್ಲ. ರಸ್ತೆ ನಿರ್ಮಾಣಕ್ಕೂ ಮುನ್ನ ಟ್ರೆಂಚಿಂಗ್ ಸೇರಿದಂತೆ ಹಲವು ಪೂರ್ವಸಿದ್ಧತಾ ಕೆಲಸಗಳು ಬಾಕಿ ಉಳಿದಿವೆ. ಒಂದೆಡೆ ಕಾಮಗಾರಿ ವಿಳಂಬವಾಗುತ್ತಿದ್ದರೆ, ಮತ್ತೊಂದೆಡೆ ಹದಗೆಟ್ಟ ರಸ್ತೆಯಿಂದ ಉಂಟಾಗುತ್ತಿರುವ ಧೂಳು ಮತ್ತು ವಾಹನಗಳ ಸಂಚಾರದ ಸಮಸ್ಯೆಯಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಇನ್ನೇನು ಮೆಣಸಿನಕಾಯಿ ಮಾರುಕಟ್ಟೆಯ ಸೀಸನ್ ಆರಂಭವಾಗಲಿದ್ದು, ಪಟ್ಟಣಕ್ಕೆ ನಿತ್ಯವೂ ಸಾವಿರಾರು ವಾಹನಗಳು ಆಗಮಿಸಲಿವೆ. ಇಂತಹ ಸಂದರ್ಭದಲ್ಲಿ ಮುಖ್ಯರಸ್ತೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗಿ ವ್ಯಾಪಾರಸ್ಥರು, ರೈತರು ಹಾಗೂ ಸಾರ್ವ ಜನಿಕರು ಸಂಕಷ್ಟ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಳೆದ ವಾರ ಜಿಲ್ಲಾಧಿಕಾರಿಗಳು ಮುಖ್ಯರಸ್ತೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಾಮಗಾರಿಗೆ ವೇಗ ನೀಡುವಂತೆ ಹಾಗೂ ಗುಣಮಟ್ಟದೊಂದಿಗೆ ನಿಯಮಾನುಸಾರ ಕಾಮಗಾರಿ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದರು. ಆದರೂ ಎಪಿಎಂಸಿ ಕಾರ್ಯದರ್ಶಿಗಳು ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವಲ್ಲಿ ವಿಫಲ ರಾಗಿರು ವುದರಿಂದ ಕಾಮಗಾರಿ ನಿರೀಕ್ಷಿತ ಪ್ರಗತಿ ಕಾಣುತ್ತಿಲ್ಲ ಎಂದು ಆರೋಪಿಸಿದರು



ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ಯೋಜನೆಯ ಫಲಾನುಭವಿಗೆ ಬಯೋಮೆಟ್ರಿಕ್ ಇ-ಕೆವೈಸಿ ಕಡ್ಡಾಯ

ಗದಗ : ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (PM-KISAN) ಯೋಜನೆಯಡಿ ಅರ್ಹ ರೈತರಿಗೆ ಆರ್ಥಿಕ ನೆರವು ಒದಗಿಸಲಾಗುತ್ತಿದೆ. ಈ ಯೋಜನೆಯ ಸೌಲಭ್ಯವನ್ನು ನಿರಂತರವಾಗಿ ಪಡೆಯಲು ಫಲಾನುಭವಿ ರೈತರು ಇ-ಕೆವ

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ

ಬುಧವಾರ 18 ನವೆಂಬರ್ 2026
18 NOVEMBER 2026

ಕಲೆ, ಸಾಹಿತ್ಯದ ಉಳಿವಿಗೆ ಪ್ರೋತ್ಸಾಹ ಅತ್ಯವಶ್ಯ: ಮಂಜುನಾಥ್ ವಿ. ದೇವ

ಹರಿಹರ : ಕನ್ನಡ ನಾಡಿನ ಸೊಗಡಿನ ಪ್ರತಿರೂಪವಾಗಿರುವ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉಳಿವು ಹಾಗೂ ಬೆಳವಣಿಗೆಗೆ ಸೂಕ್ತ ಪ್ರೋತ್ಸಾಹ ನೀಡುವುದು ಅತ್ಯವಶ್ಯಕವಾಗಿದೆ ಎಂದು ಕನ್ನಡ ಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಮಂಜುನಾಥ್ ವಿ. ದೇವ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಮೈದಾನದಲ್ಲಿ ಕನ್ನಡ ಜಾಗೃತಿ ವೇದಿಕೆಯ ದಾವಣಗೆರೆ ಜಿಲ್ಲಾ ಘಟಕ ಹಾಗೂ ಹರಿಹರ ತಾಲೂಕು ಘಟಕದ ವತಿಯಿಂದ ಭಾನುವಾರ ಸಂಜೆ 71ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ ಹಾಸ್ಯ ಸಂಜೆ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಹಿಂದಿನ ಕಾಲದಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉಳಿವಿಗಾಗಿ ರಾಜ ಮಹಾರಾಜರು ಹಾಗೂ ಶ್ರೀಮಂತರು ಕಲಾವಿದರಿಗೆ ಆಶ್ರಯ ಮತ್ತು ಪ್ರೋತ್ಸಾಹ ನೀಡುತ್ತಿದ್ದರು. ಇದ–ರಿಂದ ಉತ್ತಮ ಕಲಾ ಪ್ರದರ್ಶನಗಳು ಹಾಗೂ ನಾಟಕಗಳು ನಡೆಯಲು ಸಾಧ್ಯವಾಗುತ್ತಿತ್ತು. ಅದೇ ರೀತಿಯಲ್ಲಿ ಇಂದಿನ ದಿನಗಳಲ್ಲಿಯೂ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ನಿಷ್ಠಾವಂತ ವ್ಯಕ್ತಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಕಲಾಪೋಷಕರು ಕೈಜೋಡಿಸಬೇಕು. ಇದರೊಂದಿಗೆ ಕಲಾಭಿಮಾನಿಗಳ ಸಹಕಾರ ಮತ್ತು ಪ್ರೋತ್ಸಾಹವೂ ಅತ್ಯಗತ್ಯವಾಗಿದೆ ಎಂದರು.

ಕನ್ನಡ ಭಾಷೆ ಮತ್ತು ಕನ್ನಡಿಗರ ಅಭಿಮಾನಕ್ಕಾಗಿ ಹೋರಾಡುತ್ತಿರುವ ಕಲಾವಿದರು ಹಾಗೂ ಕನ್ನಡಪರ ಸಂಘಟನೆಗಳ 12 ಪ್ರಮುಖ



ಬೇಡಿಕೆಗಳನ್ನು ಸರ್ಕಾರ ಈಡೇರಿಸಲು ಮುಂದಾಗಬೇಕು. ಈ ಕುರಿತು ಈಗಾಗಲೇ ನಮ್ಮ ಸಂಘಟನೆಯ ವತಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಕನ್ನಡಿಗರಿಗೆ ಉದ್ಯೋಗ, ಟೆಂಡರ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು. ಸರ್ಕಾರದ ಸೌಲಭ್ಯಗಳು ಹಾಗೂ ಅವಕಾಶಗಳು ಕನ್ನಡಿಗರಿಗೆ ದೊರೆಯುವಂತಾಗಬೇಕು. ಅನ್ಯಭಾಷಿಕರಿಗೆ ಅವಕಾಶ ನೀಡುವ ಬದಲು ಕನ್ನಡಿಗರಿಗೆ ಆದ್ಯತೆ ನೀಡಬೇಕೆಂಬ ಉದ್ದೇಶದಿಂದ ನಮ್ಮ ಸಂಘಟನೆ ಹಲವು ಹೋರಾಟಗಳನ್ನು ನಡೆಸಿಕೊಂಡು ಬರುತ್ತಿದೆ.

ರಾಜ್ಯಮಟ್ಟದ ಕನ್ನಡ ಒಕ್ಕೂಟದ ಮೂಲಕ ಕನ್ನಡಪರ ಸಂಘಟನೆಗಳ ಹೋರಾಟಗಾರರು ಒಗ್ಗೂಡಿ ಕನ್ನಡಪರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದೇವೆ ಎಂದು ಮಂಜುನಾಥ್ ಹೇಳಿದರು.

ಕಾರ್ಯಕ್ರಮದಲ್ಲಿ ಹೆಸರಾಂತ ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್ ಹಾಗೂ ಯಾದಗಿರಿಯ ಬಸವರಾಜ್ ಮಹಾಮನಿ ಅವರು ತಮ್ಮ ಹಾಸ್ಯಮಯ ಕಾರ್ಯಕ್ರಮದ ಮೂಲಕ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು.

ಕೋಡಿಯಾಲ ಹೊಸಪೇಟೆಯ ಬಾಲಯೋಗಿ ಜಗದೀಶ್ವರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಬಸಲಿಕ ಚರ್ಚಿನ ಫಾದರ್ ಜಾರ್ಜ್ ಕೆ.ಎ. ಕಾರ್ಯಕ್ರಮ ಉದ್ಘಾಟಿಸಿದರು.

ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ವೀರೇಶ್ ಹನಗವಾಡಿ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಚಂದ್ರಶೇಖರ್ ಪೂಜಾರ್, ಕನ್ನಡ ಜಾಗೃತಿ ವೇದಿಕೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕವಿತಾ ಎಸ್. ಪೇಟೆಮಠ, ಜಿಲ್ಲಾಧ್ಯಕ್ಷೆ ವಿಶಾಲ ಹನುಮಂತಪ್ಪ, ತಾಲೂಕು ಅಧ್ಯ–ಕ್ಷೆ ವಿಮಲಾ ಆಂಜಿನಪ್ಪ, ಚಿರಂಜೀವಿ, ಗಾಯಕ ಅಣ್ಣಪ್ಪ ಅಜ್ಜೇರ ಸೇರಿದಂತೆ ಕನ್ನಡ ಜಾಗೃತಿ ವೇದಿಕೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಪುಷ್ಪವೃಷ್ಟಿಗೈದು ಶುಭಹಾರೈಸಿದ ಜನರು

ಹರಿಹರ : ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಾಬ್ದಿ ವರ್ಷಾಚರಣೆ ಹಾಗೂ ವಿಜಯದಶಮಿ ಅಂಗವಾಗಿ ನಗರದಲ್ಲಿ ಭಾನುವಾರ ನಡೆದ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಹರಿಹರ ನಗರ ಹಾಗೂ ಗ್ರಾಮಾಂತರ ಪ್ರದೇಶದ ಸಾವಿರಾರು ಜನರು ಪುಷ್ಪವೃಷ್ಟಿಗೈದು ಶುಭಹಾರೈಸಿದರು.

ಕ್ಷೇತ್ರನಾಥ ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಆರಂಭಗೊಂಡ ಪಥ ಸಂಚಲನವು ನಗರದ ಕುಂಬಾರ ಓಣಿ, ಹಳ್ಳದಕೇರಿ ಮಾರ್ಗವಾಗಿ ಶಿವಮೊಗ್ಗ–ಹೊಸಪೇಟೆ ರಾಜ್ಯ ಹೆದ್ದಾರಿ ತಲುಪಿತು. ಅಲ್ಲಿಂದ ಶ್ರೀರಾಮ ಮಂದಿರದ ಮುಂಭಾಗವಾಗಿ ಜೆ.ಸಿ. ಬಡಾವಣೆ, ಶಿವಮೊಗ್ಗ ಸರ್ಕಲ್, ಬೊಂಗಾಳೆ ಸರ್ಕಲ್ ಹಾಗೂ ಹರಪನಹಳ್ಳಿ ಸರ್ಕಲ್ ಮೂಲಕ ಸಾಗಿ ಗಾಂಧಿ ಮೈದಾನ ತಲುಪುವುದರೊಂದಿಗೆ ಪಥ ಸಂಚಲನ ಮುಕ್ತಾಯಗೊಂಡಿತು.

ಜಾಂಜ್, ಡೋಲು, ಭಾಜಾ ವಾದ್ಯಗಳ ನಾದ ಹಾಗೂ ಪೀಪಿ ಧ್ವನಿಯೊಂದಿಗೆ ಮುನ್ನಡೆದ ಪಥ ಸಂಚಲನದಲ್ಲಿ, ಶಿಸ್ತಿನ ಸಿಪಾಯಿಗಳಂತೆ ಕೈಯಲ್ಲಿ ಲಾಠಿ ಹಿಡಿದು, ಪ್ಯಾಂಟ್ ಹಾಗೂ ತಲೆಯ ಮೇಲೆ ಕಪ್ಪು ಟೋಪಿ ಧರಿಸಿ ಸಮವಸ್ತ್ರದಲ್ಲಿ ಸ್ವಯಂಸೇವಕರು ಹೆಜ್ಜೆ ಹಾಕಿದರು.

ಪಥ ಸಂಚಲನ ಸಾಗುವ ಮಾರ್ಗದುದ್ದಕ್ಕೂ ಓಣಿಗಳಲ್ಲಿನ ಮನೆಗಳ ಮುಂದೆ ಮಹಿಳೆಯರು ನೀರು ಹಾಕಿ ರಸ್ತೆಯನ್ನು ಸ್ವಚ್ಛಗೊಳಿಸಿ, ರಂಗೋಲಿ ಬಿಡಿಸಿ ಶತಾಬ್ದಿ ವರ್ಷಾಚರಣೆಯ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಶುಭವಾಗಲಿ ಎಂಬ ಸಂದೇಶಗಳನ್ನು ಬರೆದಿದ್ದರು. ಮನೆಗಳ ಮಹಡಿಗಳ ಮೇಲೆ ನಿಂತು ಪಥ ಸಂಚಲನ ವೀಕ್ಷಿಸಿದ ಮಹಿಳೆಯರು, ಮಕ್ಕಳು ಹಾಗೂ ಹಿರಿಯ ನಾಗರಿಕರು ಸೇವಂತಿಗೆ, ಮಲ್ಲಿಗೆ, ಕನಕಾಂಬರ ಹೂಗಳನ್ನು ಎರಚಿ ಪುಷ್ಪವೃಷ್ಟಿ ಮೂಲಕ ಶುಭ ಹಾರೈಸಿದರು. ಈ ದೃಶ್ಯ ಎಲ್ಲರ ಗಮನ ಸೆಳೆಯಿತು.

ಪಥ ಸಂಚಲನದಲ್ಲಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಬಾತಿ ಚಂದ್ರಶೇಖರ, ಬಿಜೆಪಿ ನಗರ ಕಾರ್ಯದರ್ಶಿ ಸಂತೋಷ್ ಗುಡಿಮನಿ, ರಾಘವೇಂದ್ರ ಉಪಾಧ್ಯಾಯ, ಕೀರ್ತಿಕುಮಾರ್, ನಾಯವಾದಿ ವೀರೇಶ್ ಅಜ್ಜಣ್ಣನವರ, ಆರ್.ಎಲ್. ಯೋಗೀಶ್, ರವಿ ರಾಯ್ಕರ್, ಚಂದ್ರಕಾಂತಗೌಡ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಪಥ ಸಂಚಲನದ ಸಂದರ್ಭದಲ್ಲಿ ಪೊಲೀಸರು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.



ಕಳಪೆ ಕಾರ್ಮಿಕ ಕಿಟ್ ವಿತರಣೆ: ರಸ್ತೆಯಲ್ಲೇ ಕಿಟ್ ಇಟ್ಟು ಕಾರ್ಮಿಕರ ಪ್ರತಿಭಟನೆ

ಗಜೇಂದ್ರಗಡ: ಕಾರ್ಮಿಕ ಇಲಾಖೆಯಿಂದ ಗಜೇಂದ್ರಗಡ ಭಾಗಕ್ಕೆ ಒಟ್ಟು 848 ಕಾರ್ಮಿಕ ಕಿಟ್‌ಗಳನ್ನು ವಿತರಿಸಲಾಗಿದ್ದು, ಕಳಪೆ ಗುಣಮಟ್ಟದ ಹಾಗೂ ಬಳಕೆಗೆ ಬಾರದ ಸಲಕರಣೆಗಳನ್ನು ನೀಡಲಾಗಿದೆ ಎಂದು ಆರೋಪಿಸಿ ಕಾರ್ಮಿಕರು ರಸ್ತೆಯಲ್ಲಿಯೇ ಕಿಟ್‌ಗಳನ್ನು ಇಟ್ಟು ಪ್ರತಿಭಟನೆ ನಡೆಸಿದರು.

ವಿತರಿಸಲಾದ ಕಿಟ್‌ಗಳಲ್ಲಿ ಮಾಸ್ಕ್, ತಲೆಗೆ ಸುರಕ್ಷತೆ ನೀಡದ ಕಳಪೆ ಹೆಲ್ಮೆಟ್ ಹಾಗೂ ಅಂಗಿ ಸೇರಿದಂತೆ ಗುಣಮಟ್ಟವಿಲ್ಲದ ಸಾಮಗ್ರಿಗಳಿವೆ. ಗಾರೆ ಮತ್ತು ಕಟ್ಟಡ ಕಾರ್ಮಿಕರಿಗೆ ಅಗತ್ಯವಿರುವ ಯಾವುದೇ ಉಪಯುಕ್ತ ಸಲಕರಣೆಗಳನ್ನು ನೀಡಿಲ್ಲ ಎಂದು ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ನರೇಗಲ್ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಸಂತೋಷ ಮನ್ ಒಡ್ಡರ್ ಮಾತನಾಡಿ, ಕಾರ್ಮಿಕ ಸಚಿವರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕಟ್ಟಡ ಕಾರ್ಮಿಕರ ಸಂಕಷ್ಟಕ್ಕೆ ಸ್ಪಂದಿಸಬೇಕು. ಉಚಿತ ಆರೋಗ್ಯ ತಪಾಸಣೆ ಹೆಸರಿನಲ್ಲಿ ಹಲವು ಅಕ್ರಮಗಳು ನಡೆಯುತ್ತಿರುವ ಆರೋಪಗಳಿದ್ದು, ಕಾರ್ಮಿಕರಿಗೆ 5 ಸಾವಿರದಿಂದ 50 ಸಾವಿರದವರೆಗೆ ವೈದ್ಯಕೀಯ ನೆರವು ನೀಡಬೇಕು. ಗುಣಮಟ್ಟದ ಕಾರ್ಮಿಕ ಕಿಟ್‌ಗಳನ್ನು ವಿತರಿಸಬೇಕು. ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾರ್ಥಿವೇತನ ನೀಡುವ ಮೂಲಕ ಕಾರ್ಮಿಕರ ಕುಟುಂಬಗಳಿಗೆ ನೆರವಾಗಬೇಕು ಎಂದು ಒತ್ತಾಯಿಸಿದರು.



ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಬೇಕು: ನ್ಯಾಯಾಧೀಶ ಬಿರಾದಾರ ದೇವಿಂದ್ರಪ್ಪ ಎನ್.

ಹಾವೇರಿ: ಇಂದಿನ ದಿನಗಳಲ್ಲಿ ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿದ್ದು, ಇದರ ಪರಿಣಾಮ ಇಡಿ ಸಮಾಜ ಮೇಲೆ ಬೀರುತ್ತದೆ. ಆದ್ದರಿಂದ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪ ಎನ್. ಅವರು ಹೇಳಿದರು.

ಹೊಸರಿತ್ತಿ ಗ್ರಾಮದಲ್ಲಿ ಶನಿವಾರ ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಗುದ್ಲೆಪ್ಪ ಹಳ್ಳಿಕೇರಿ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಮಾದಕ ವಸ್ತುಗಳ ನಿಷೇಧ ಮತ್ತು ಅಕ್ರಮ ಸಾಗಾಣಿಕೆ ಹಾಗೂ ಮಾಧಕ ವಸ್ತುಗಳ ಕುರಿತು ಜಾಗೃತಿ ಮತ್ತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳ ಅಕ್ರಮ ಸಾಗಾಣಿ–ಕೆಯೂ ಸಹ ಹೆಚ್ಚುತ್ತಿದೆ, ಮನೆಗಳಲ್ಲಿ ಮಾದಕ ವಸ್ತುಗಳ ವ್ಯಸನಿಗಳಿದ್ದಲ್ಲಿ ಅವರಿಗೆ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ತಿಳುವಳಿಕೆ ನೀಡಬೇಕು. ನಿಮ್ಮ ಶಾಲೆಯ ಸುತ್ತಮುತ್ತಲಿನ ಪರಿಸರದಲ್ಲಿ ಯಾವುದಾದರೂ ಅಂಗಡಿಯಲ್ಲಿ ಮಾದಕ ವಸ್ತುಗಳ ಮಾರಾಟ ಜಾಲವಿದ್ದಲ್ಲಿ ನೀವು ಸಂಬಂಧಿಸಿದವರಿಗೆ ತಿಳಿಸಬೇಕು. ಮಕ್ಕಳಿಗೆ ತೆ–ಂದರೆಯಾದರೆ ಮಕ್ಕಳ ಸಹಾಯವಾಣಿ 1098 ಕರೆ ಮಾಡಬೇಕು ಅಥವಾ 112ಗೆ ಕರೆಮಾಡಬೇಕು ಎಂದು ಹೇಳಿದರು.

ದತ್ತು ಪ್ರಕ್ರಿಯೆ ಕುರಿತು ಪ್ರಮಾಣವಚನ ಬೋಧಿಸಿದರು ಹಾಗೂ ಮಾದಕ ವಸ್ತುಗಳ ಜಾಗೃತಿ ನಡಿಗೆ ಅಭಿಯಾನಕ್ಕೆ ಚಾಲನೆ ನೀಡಿದರು.

ಹೊಸರಿತ್ತಿ ಜಿ.ಎಚ್.ಸ್ಕೂಲ್ ಮುಖ್ಯೋಪಾಧ್ಯಾಯ ಜೆ.ಪಿ.ಕೋರಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಿವಿಲ್ ನ್ಯಾಯವಾದಿಗಳು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ ಶ್ರೀಶೈಲಜಾ ಹೆಚ್. ವಿ, ಜಿಲ್ಲಾ ನ್ಯಾಯವಾದಿಗಳ ಸಂಘ ಅಧ್ಯಕ್ಷ ಹೆಚ್. ಸಿ. ಸಿದ್ದನಗೌಡರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ ಬಿ., ಹೊಸರಿತ್ತಿ ಗ್ರಾ.ಪಂ. ಪ್ರಭಾರ ಆಡಳಿತಾಧಿಕಾರಿ ಅಕ್ಬರಲಿ ಇತರರು ಉಪಸ್ಥಿತರಿದ್ದರು.

ಪ್ರವಚನ ಆಲಿಸಿ, ಜೀವನ ಪಾವನ ಮಾಡಿಕೊಳ್ಳೋಣ

ನವೆಂಬರ್ 28ರಿಂದ ಡಿ. 6ರವರೆಗೆ ರೋಣದಲ್ಲಿ ಗವಿಸಿದ್ಧೇಶ್ವರ ಸ್ವಾಮೀಜಿಗಳ ಪ್ರವಚನ

ರೋಣ: ಕೊಪ್ಪಳ ಗವಿಮಠದ ಶ್ರೀ ಗವಿಸಿದ್ಧೇಶ್ವರ ಶ್ರೀಗಳು ಸಮಯಕ್ಕೆ ಬಹಳಷ್ಟು ಮಹತ್ವ ನೀಡುತ್ತಾ–ರೆ. ಹೀಗಾಗಿ ಸಮಯಕ್ಕನುಗುಣವಾಗಿ ಪ್ರವಚನಕ್ಕೆ ಹಾಜರಾಗೋಣ. ಪರಮಪೂಜ್ಯರ ಮಾತುಗಳು ನಮ್ಮ ಬದುಕಿಗೆ ಆಶಾದೀಪವಾಗಲಿವೆ ಎಂದು ಹಡಗಲಿಯ ಶ್ರೀ ಹಿರೇಶಾಂತವೀರ ಸ್ವಾಮೀಜಿ ಹೇಳಿದರು.

ಪಟ್ಟಣದ ದ್ರೋಣಾಚಾರ್ಯ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಗವಿಸಿದ್ಧೇಶ್ವರ ಶ್ರೀಗಳ ಪ್ರವಚನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ನ. 28ರಿಂದ ಡಿಸೆಂಬರ್ 6ರವರೆಗೆ ಗವಿಸಿದ್ಧೇಶ್ವರ ಸ್ವಾಮೀಜಿಗಳ ಪ್ರವಚನ ಆಯೋಜಿಸಲಾಗಿದೆ. ನಾಡೆ–ನುಡಿಯಲ್ಲಿ ಮೇಲ್ಮಂಕಿಯಲ್ಲಿರುವ ಗವಿಸಿದ್ಧೇಶ್ವರ ಶ್ರೀಗಳ ಆಶೀರ್ವಚನ ಕೇಳಿ ಜೀವನವನ್ನು ಪಾವನ ಮಾಡಿಕೊಳ್ಳೋಣ ಎಂದರು.



ಕೊತಬಾಳ ಅಂಕಲಿಮಠದ ಶ್ರೀ ಗಂಗಾಧ–ರೇಂದ್ರ ಸ್ವಾಮೀಜಿ ಮಾತನಾಡಿ, ನಾನು, ನಂದು ಹಾಗೂ ನನ್ನಿಂದಲೇ ಎಂಬ ಮೂರು ಬಿಟ್ಟರೆ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ. ಅಂತರಾತ್ಮದ ಅರಿವಿನ ಜಾಗೃತಿ ಮೂಡಿಸಲು ಶ್ರೀಗಳು ಆಗಮಿಸುತ್ತಿರುವುದು ನಮ್ಮ–ನಿಮ್ಮೆಲ್ಲರ ಪುಣ್ಯ ಎಂದರು.

ರೋಣ ಹಿರೇಮಠದ ಜಗದೀಶ ಹಿರೇಮಠ ಸ್ವಾಮೀಜಿ ಮಾತನಾಡಿ, ಪ್ರಾಸಬದ್ಧ ಪ್ರವಚನದಿಂದ ಕೊಪ್ಪಳದ ಗವಿಸಿದ್ಧೇಶ್ವರ ಶ್ರೀಗಳು ಜಗತ್ ಪ್ರಸಿದ್ಧರಾಗಿದ್ದಾರೆ. ಮಕ್ಕಳಲ್ಲಿ ಶ್ರೀಗಳ ಜ್ಞಾನದ ಬೆಳಕು ಮೂಡಿಸಬೇಕು. ಮುಖ್ಯವಾಗಿ ಯುವಪೀಳಿಗೆಯನ್ನು ಪ್ರವಚನಕ್ಕೆ ಕರೆತರಬೇಕಿದೆ ಎಂದರು.



ಕೊಪ್ಪಳದ ಸಂಗಣ್ಣ ಗಡಗಿ ಮಾತನಾಡಿ, 9 ದಿನದ ಪ್ರವಚನದ ಅಂಗವಾಗಿ ಸದ್ಭಾವನಾ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಮೊದಲ ಮೂರು ದಿನ ರೋಣ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಹಾಗೂ ಇನ್ನುಳಿದ 6 ದಿನ ಹಳ್ಳಿಗಳಲ್ಲಿ ಬೆಳಗ್ಗೆ 6ರಿಂದ 8 ಗಂಟೆಯವರೆಗೆ ಸದ್ಭಾವನಾ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ನಿತ್ಯ ಸಂಜೆ 6ರಿಂದ 7 ಗಂಟೆಯವರೆಗೆ ಪ್ರವಚನ ನಡೆಯಲಿದೆ ಎಂದರು.

ಮಿಥುನ್ ಪಾಟೀಲ ಮಾತನಾಡಿ, ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಶ್ರೀಗಳು ಸ್ವಚ್ಛತೆಗೆ ಬಹಳಷ್ಟು ಮಹತ್ವ ಕೊಡುತ್ತಾರೆ. ಹೀಗಾಗಿ ರೋಣ ಸ್ವಚ್ಛತೆಗೆ ಮೊದಲಾದ್ಯತೆ ನೀಡೋಣ. ಪ್ರವಚನ ಯಶಸ್ವಿಯಾಗಲು ಪ್ರತಿಯೊಬ್ಬರ ಸಹಕಾರ ಮುಖ್ಯವಾಗಿದೆ ಎಂದರು.

ಮತ್ತಣ್ಣ ಲಿಂಗನಗೌಡ್ರ, ಬಸವರಾಜ ರಂಗನಗೌಡ್ರ, ಅಶೋಕ ದೇಶಣ್ಣವರ ಮಾತನಾಡಿದರು.

ಶಿವಣ್ಣ ಪಲ್ಲೇದ, ವೀರಣ್ಣ ಶೆಟ್ಟರ್, ಬಸವರಾಜ ನವಲಗುಂದ, ಬಸವರಾಜ ತಳವಾರ, ಸಂ–ಜಯ್ ದೊಡ್ಡಮನಿ, ಮುತ್ತು ನವಲಗುಂದ, ಶಶಿಕಲಾ ಮಿಥುನ್ ಪಾಟೀಲ, ರಂಗಮ್ಮ ಭಜಂತ್ರಿ, ಜಾನ್‌ಬೇಗಂ ಯಲಿಗಾರ ಸೇರಿ ನೂರಾರು ಜನರು ಇದ್ದರು.

ಮಕ್ಕಳ ಗ್ರಾಮಸಭೆಯಲ್ಲಿ ಸಮಸ್ಯೆಗಳ ಅನಾವರಣ

ರೋಣ: ತಾಲೂಕಿನ ಬೆಳವಣಕಿ ಗ್ರಾಮ ಪಂಚಾಯಿತಿಯಿಂದ ಹಮ್ಮಿಕೊಂಡಿದ್ದ ಮಕ್ಕಳ ಹಕ್ಕುಗಳ ಗ್ರಾಮಸಭೆಯಲ್ಲಿ ಹಲವು ಸಮಸ್ಯೆಗಳು ಅನಾವರಣಗೊಂಡವು.

ಕಸ ವಿಲೇವಾರಿ ಸಮಸ್ಯೆ, ಕುಡಿಯುವ ನೀರು, ಶೌಚಗೃಹ ವ್ಯವಸ್ಥೆ, ಶುಚಿತ್ವದಿಂದ ಕೂಡಿದ ಬಿಸಿಯೂಟ ತಯಾರಿಸುವಂತೆ ಶಾಲಾ ಮಕ್ಕಳು ಪಿಡಿಓ ಅವರ ಗಮನಕ್ಕೆ ತಂದರು.

ಶಾಲೆಯಲ್ಲಿ ಕಲಿಯುವ ನಮಗೆ ಸರಿಯಾದ ಶೌಚಗೃಹದ ವ್ಯವಸ್ಥೆ ಇಲ್ಲ. ಶಾಲಾ ಆವರಣದಲ್ಲಿ ಶೌಚಗೃಹ ನಿರ್ಮಿಸಿ ಅದಕ್ಕೆ ನೀರಿನ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಮಾಡಿಕೊಡುವಂತೆ ವಿದ್ಯಾರ್ಥಿನಿಯೊಬ್ಬರು ಪಿಡಿಓ ಶಿಲ್ಪಾ ಕವಲೂರ ಅವರಲ್ಲಿ ಮನವಿ ಮಾಡಿದರು.

ಮತ್ತೊಬ್ಬ ವಿದ್ಯಾರ್ಥಿ ಮಾತನಾಡಿ, ಶಾಲೆಯಲ್ಲಿ ತಯಾರಿಸುವ ಬಿಸಿಯೂಟ ಶುಚಿತ್ವದಿಂದ ಕೂಡಿರುವುದಿಲ್ಲ. ಈ ಬಗ್ಗೆ ನೀವು ಮೇಲುಸ್ತುವಾರಿ ಮಾಡಿ ಬಿಸಿಯೂಟ ತಯಾರಕರಿಗೆ ಸೂಚನೆ ನೀಡಬೇಕು ಎಂದು ಕೋರಿಕೊಂಡನು. ಇನ್ನು ಗ್ರಾಮಸ್ಥರು ಶಾಲಾ ಆವರಣದಲ್ಲಿಯೇ ಕಸ ತಂದು ಸುರಿಯುತ್ತಿದ್ದಾರೆ. ಇದರಿ

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

ಭಕ್ತರ ಕಾಣಿಕೆ ಹೆಚ್ಚುತ್ತಿದೆ, ದೇವಾಲಯಗಳ ನಿರ್ವಹಣೆ ಮಾತ್ರ ಸುಧಾರಿಸುತ್ತಿಲ್ಲ!


ದೇವರು, ಧರ್ಮ, ಭಕ್ತಿಯೂ ವಾಣಿಜ್ಯೀಕರಣದ ಸುಳಿಯಲ್ಲಿ

ಭಾರತದ ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸದ ಜೀವಂತ ಸಾಕ್ಷಿಗಳೆಂದರೆ ನಮ್ಮ ಪ್ರಾಚೀನ ದೇವಾಲಯಗಳು. ಸಾವಿರಾರು ವರ್ಷಗಳ ಇತಿಹಾಸವನ್ನು ತಮ್ಮ ಗರ್ಭದಲ್ಲಿ ಹೊತ್ತು ನಿಂತಿರುವ ದೇವಾಲಯಗಳು ಕೇವಲ ಪೂಜಾ ಸ್ಥಳಗಳಲ್ಲ. ಅವು ನಮ್ಮ ಪೂರ್ವಜರ ವಾಸ್ತುಶಿಲ್ಪದ ಅದ್ಭುತ ಕಲಾಕೃತಿಗಳು, ಶಿಲ್ಪಕಲೆಯ ವೈಭವ, ಧಾರ್ಮಿಕ ನಂಬಿಕೆಗಳ ಪ್ರತೀಕಗಳು ಹಾಗೂ ನಮ್ಮ ನಾಗರಿಕತೆ–ಯ ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅಮೂಲ್ಯ ಸಾಂಸ್ಕೃತಿಕ ಸಂಪತ್ತು. ಇಂತಹ ದೇವಾಲಯಗಳನ್ನು ನೋಡಲು ದೇಶದ ವಿವಿಧ ಭಾಗಗಳಿಂದ ಮಾತ್ರವಲ್ಲ, ವಿದೇಶಗಳಿಂದಲೂ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಜಗತ್ತಿಗೆ ಹೆಮ್ಮೆ ಮೂಡಿಸುವ ಶಕ್ತಿ ಈ ದೇವಾಲಯಗಳಿಗಿದೆ. ಆದರೆ ಇಷ್ಟೊಂದು ಮಹತ್ವ ಹೊಂದಿರುವ ನಮ್ಮ ಅನೇಕ ಪ್ರಾಚೀನ ದೇವಾಲಯಗಳ ಇಂದಿನ ಸ್ಥಿತಿಗತಿಗಳನ್ನು ಗಮನಿಸಿದಾಗ ಸಂತೋಷದ ಜೊತೆಗೆ ಬೇಸರವೂ ಉಂಟಾಗುತ್ತದೆ. ಹಳೆಯ ದೇವಾಲಯಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಸರ್ಕಾರಗಳು ಮುಂದಾಗುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ಅನೇಕ ಐತಿಹಾಸಿಕ ದೇವಾಲಯಗಳನ್ನು ಅಭಿವೃದ್ಧಿಪಡಿಸಲು ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ದೇವಾಲಯಗಳ ಜೀರ್ಣೋದ್ಧಾರ, ರಸ್ತೆ ಸಂಪರ್ಕ, ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಹಾಗೂ ಭಕ್ತರಿಗೆ ಮೂಲಸೌಕರ್ಯ ಕಲ್ಪಿಸುವ ಪ್ರಯತ್ನಗಳು ನಡೆಯುತ್ತಿವೆ. ಕೆಲವು ಪ್ರಸಿದ್ಧ ದೇವಾಲಯಗಳಲ್ಲಿ ಪ್ರತಿದಿನವೂ ಭಕ್ತ–ರಿಂದ ಅಪಾರ ಪ್ರಮಾಣದ ಕಾಣಿಕೆ ಮತ್ತು ದೇಣಿಗೆ ಸಂಗ್ರಹವಾಗುತ್ತದೆ. ಹೀಗಿರುವಾಗ ಈ ಹಣವನ್ನು ದೇವಾಲಯಗಳ ನಿರ್ವಹಣೆ, ಸ್ವಚ್ಛತೆ, ಮೂಲಸೌಕರ್ಯ ಮತ್ತು ಪರಂಪರೆಯ ಸಂರಕ್ಷಣೆಗೆ ಸಮರ್ಪಕವಾಗಿ ಬಳಸಬೇಕಾದ ಜವಾಬ್ದಾರಿಯೂ ಅಷ್ಟೇ ಮಹತ್ವದ್ದಾಗಿದೆ. ಆದರೆ ವಾಸ್ತವದಲ್ಲಿ ಅನೇಕ ಕಡೆ ನಿರ್ವಹಣೆಯ ಕೊರತೆ ಎದ್ದು ಕಾಣುತ್ತದೆ. ಭಕ್ತರ ಹಣ ಹರಿದು ಬರುತ್ತಿದ್ದರೂ ದೇವಾಲಯದ ಸುತ್ತಮುತ್ತ ಸ್ವಚ್ಛತೆ ಇಲ್ಲದಿರುವುದು, ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿರದಿರುವುದು, ಶೌಚಾಲಯಗಳ ದುಸ್ಥಿತಿ, ಸರಿಯಾದ ಸರತಿ ಸಾಲಿನ ವ್ಯವಸ್ಥೆ ಇಲ್ಲದಿರುವುದು ಮುಂತಾದ ಸಮಸ್ಯೆಗಳು ಕಂಡುಬರುತ್ತವೆ.

ನಮ್ಮ ದೇಶದ ದೇವಾಲಯಗಳ ವಾಸ್ತುಶಿಲ್ಪವನ್ನು ನೋಡಿದರೆ ಅಚ್ಚರಿಯಾಗುತ್ತದೆ. ಹೊಯ್ಸಳರ ಶಿಲ್ಪಕಲೆ, ಚಾಲುಕ್ಯರ ವಾಸ್ತುಶೈಲಿ, ಕದಂಬರ ಕೊಡುಗೆ, ವಿಜಯನಗರ ಸಾಮ್ರಾಜ್ಯದ ದೇವಾಲಯಗಳ ವೈಭವ ಇವೆಲ್ಲವೂ ನಮ್ಮ ಇತಿಹಾಸದ ಹೆಮ್ಮೆಯ ಅಧ್ಯಾಯಗಳು. ಕಲ್ಲಿನ ಮೇಲೆ ಕೆತ್ತಿರುವ ಸೂಕ್ಷ್ಮ ಕಲಾಕೃತಿಗಳು, ಗೋಪುರಗಳ ವಿನ್ಯಾಸ, ಮಂಟಪಗಳ ನಿರ್ಮಾಣ, ಕಂಬಗಳ ಮೇಲಿನ ಶಿಲ್ಪಗಳು ಇಂದಿನ ಆಧುನಿಕ ತಂತ್ರಜ್ಞಾನಕ್ಕೂ ಸವಾಲು ಹಾಕುವಂತಿವೆ. ಇಂತಹ ಅಮೂಲ್ಯ ಸ್ಮಾರಕಗಳನ್ನು ಸಂರಕ್ಷಿಸುವುದು ಕೇವಲ ಧಾರ್ಮಿಕ ಕರ್ತವ್ಯವಲ್ಲ, ಅದು ರಾಷ್ಟ್ರೀಯ ಸಾಂಸ್ಕೃತಿಕ ಹೊಣೆಗಾರಿಕೆಯೂ ಹೌದು. ಆದರೆ ಕೆಲವು ದೇವಾಲಯಗಳಲ್ಲಿ ಗೋಡೆಗಳು ಬಿರುಕು ಬಿಟ್ಟಿರುವುದು, ಶಿಲ್ಪಗಳು ಹಾಳಾಗುತ್ತಿರುವುದು, ಮಳೆನೀರು ಸೋರಿಕೆಯಿಂದ ಕಟ್ಟಡ ದುರ್ಬಲವಾಗುತ್ತಿರುವುದು, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಗತ್ಯ ಕಟ್ಟಡಗಳು ತಲೆ ಎತ್ತುತ್ತಿರುವುದು ಕಂಡುಬರುತ್ತದೆ. ಜೀರ್ಣೋದ್ಧಾರದ ಹೆಸರಿನಲ್ಲಿ ಕೆಲವು ಕಡೆ ಮೂಲ ವಾಸ್ತುಶಿಲ್ಪಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಅಪಾಯವೂ ಇದೆ. ಇಂತಹ ಕಾಮಗಾರಿಗಳನ್ನು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಯಲ್ಲಿ ಪರಿಣತಿ ಹೊಂದಿರುವ ತಜ್ಞರ ಮಾರ್ಗದರ್ಶನದಲ್ಲಿಯೇ ಕೈಗೊಳ್ಳಬೇಕು. ಇನ್ನೊಂದು ಪ್ರಮುಖ ಸಮಸ್ಯೆಯೆಂದರೆ ದೇವಾಲಯಗಳ ಸ್ವಚ್ಛತೆ. ದೇವಾಲಯಕ್ಕೆ ಬರುವ ಭಕ್ತರು ದೇವರ ದರ್ಶನ ಪಡೆದು ಪುಣ್ಯ ಸಂಪಾದಿಸುವ ಆಸೆಯಿಂದ ಬರುತ್ತಾರೆ. ಆದರೆ ದೇವಾಲಯದ ಆವರಣದಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ತಿಂಡಿ ಪೊಟ್ಟಣಗಳು, ಹೂವು, ತೆಂಗಿನಕಾಯಿ ತ್ಯಾಜ್ಯ ಹಾಗೂ ಇತರ ಕಸವನ್ನು ಎಲ್ಲೆಂದರಲ್ಲಿ ಎಸೆಯುವ ಪ್ರವೃತ್ತಿ ಇನ್ನೂ ಕಡಿಮೆಯಾಗಿಲ್ಲ. ದೇವರ ಮುಂದೆ ಭಕ್ತಿಯಿಂದ ಕೈಮುಗಿಯುವ ನಾವು ದೇವರ ಆವರಣವನ್ನು ಸ್ವಚ್ಛವಾಗಿಡುವ ಕನಿಷ್ಠ ಜವಾಬ್ದಾರಿಯನ್ನು ಮರೆತುಬಿಡುತ್ತೇವೆ. ದೇವರಿಗೆ ಹೂವು ಅರ್ಪಿಸುವ ಕೈಗಳೇ ಪ್ಲಾಸ್ಟಿಕ್ ಕಸವನ್ನು ಎಸೆಯುವಂತಾದರೆ ನಮ್ಮ ಭಕ್ತಿಯ ಅರ್ಥವೇನು? ಸ್ವಚ್ಛತೆ ಕೇವಲ ದೇವಸ್ಥಾನದ ಸಿಬ್ಬಂದಿಯ ಜವಾಬ್ದಾರಿಯಲ್ಲ. ದೇವಾಲಯಕ್ಕೆ ಭೇಟಿ ನೀಡುವ ಪ್ರತಿಯೊಬ್ಬ ಭಕ್ತನೂ ಅದರಲ್ಲಿ ಪಾಲುದಾರನಾಗಬೇಕು. ದೇವಾಲಯದ ಆವರಣವನ್ನು ಸ್ವಚ್ಛವಾಗಿಡುವುದು ಕೂಡ ಒಂದು ರೀತಿಯ ಸೇವೆಯೇ ಎಂಬ ಅರಿವು ಮೂಡಬೇಕಾಗಿದೆ. ಇನ್ನು ಸರತಿ ಸಾಲಿನ ವ್ಯವಸ್ಥೆಯಂತೂ ಅನೇಕ ಪ್ರಸಿದ್ಧ ದೇವಾಲಯಗಳಲ್ಲಿ ದೊಡ್ಡ ಸವಾಲಾಗಿದೆ. ಹಬ್ಬ ಹರಿದಿನಗಳು, ವಾರಾಂತ್ಯಗಳು ಹಾಗೂ ವಿಶೇಷ ಪೂಜೆಯ ಸಂದರ್ಭದಲ್ಲಿ ಸಾವಿರಾರು ಭಕ್ತರು ದೇವಾಲಯಗಳಿಗೆ ಆಗಮಿಸುತ್ತಾರೆ. ಗಂಟೆಗಟ್ಟಲೆ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಎದುರಾಗುತ್ತದೆ. ವೃದ್ಧರು, ಮಕ್ಕಳು, ಗರ್ಭಿಣಿಯರು ಹಾಗೂ ಅಂಗವಿಕಲರು ಅನುಭವಿಸುವ ತೊಂದರೆ ಹೇಳತೀರದು. ಕೆಲವು ಕಡೆಗಳಲ್ಲಿ ಸರಿಯಾದ ಸರತಿ ಸಾಲು ಇಲ್ಲದೆ ನೂಕುನುಗ್ಗಲು ಉಂಟಾಗುತ್ತದೆ. ಹಣ ನೀಡಿ ವಿಶೇಷ ದರ್ಶನ ಪಡೆಯುವವರಿಗೆ ಒಂದು ವ್ಯವಸ್ಥೆ, ಸಾಮಾನ್ಯ ಭಕ್ತರಿಗೆ ಮತ್ತೊಂದು ವ್ಯವಸ್ಥೆ ಎಂಬ ಅಸಮಾನತೆಯ ಭಾವನೆಯೂ ಮೂಡುತ್ತದೆ. ದೇವರ ದರ್ಶನ ಪಡೆಯುವುದಕ್ಕೆ ಬರುವ ಭಕ್ತರಿಗೆ ಅನುಕೂಲ ಕಲ್ಪಿಸುವುದು ದೇವಾಲಯದ ಆಡಳಿತ ಮಂಡಳಿಯ ಮೊದಲ ಆದ್ಯತೆಯಾಗಬೇಕು. ದರ್ಶನ ವ್ಯವಸ್ಥೆಯಲ್ಲಿ ಶಿಸ್ತು, ಪಾರದರ್ಶಕತೆ ಮತ್ತು ಸಮಾನತೆಯ ತತ್ವ ಇರಬೇಕು. ಆನ್‌ಲೈನ್ ದರ್ಶನ ನೋಂದಣಿ, ಸಮಯ ನಿಗದಿತ ಪ್ರವೇಶ, ಸರಿಯಾದ ಬ್ಯಾರಿಕೇಡ್‌ಗಳು, ಕುಡಿಯುವ ನೀರು, ವಿಶ್ರಾಂತಿ ಸ್ಥಳಗಳು ಹಾಗೂ ತುರ್ತು ವೈದ್ಯಕೀಯ ನೆರವಿನ ವ್ಯವಸ್ಥೆ ಇರಬೇಕು.

ಇವೆಲ್ಲಕ್ಕಿಂತ ಗಂಭೀರವಾಗಿ ಚರ್ಚಿಸಬೇಕಾದ ಮತ್ತೊಂದು ಸಂಗತಿಯೆಂದರೆ ದೇವಾಲಯಗಳು, ದೇವರು ಮತ್ತು ಧಾರ್ಮಿಕ ಆಚರಣೆಗಳು ಕ್ರಮೇಣ ವಾಣಿಜ್ಯೀಕರಣದ ಸುಳಿಗೆ ಸಿಲುಕುತ್ತಿರುವುದು. ಒಂದು ಕಾಲದಲ್ಲಿ ದೇವಾಲಯಕ್ಕೆ ಹೋಗುವುದು ಮನಸ್ಸಿನ ನೆಮ್ಮದಿಗಾಗಿ, ಭಕ್ತಿ ಮತ್ತು ಆತ್ಮತೃಪ್ತಿಗಾಗಿ, ದೇವರೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುವುದಕ್ಕಾಗಿ ಆಗಿತ್ತು. ಆದರೆ ಇಂದು ಅನೇಕ ಕಡೆ ದೇವರ ದರ್ಶನವೂ ಒಂದು ರೀತಿಯ ಆರ್ಥಿಕ ವ್ಯವಸ್ಥೆಯ ಭಾಗವಾಗುತ್ತಿರುವಂತೆ ಭಾಸವಾಗುತ್ತದೆ. ಸಾಮಾನ್ಯ ದರ್ಶನಕ್ಕೆ ಗಂಟೆಗಟ್ಟಲೆ ಕಾಯಬೇಕು; ಹಣ ಪಾವತಿಸಿದರೆ ವಿಶೇಷ ದರ್ಶನ, ಇನ್ನಷ್ಟು ಹಣ ನೀಡಿದರೆ ತ್ವರಿತ ದರ್ಶನ ಎಂಬ ವ್ಯವಸ್ಥೆಗಳು ಭಕ್ತರಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ. ದೇವರ ಮುಂದೆ ಎಲ್ಲರೂ ಸಮಾನರು ಎಂಬ ನಂಬಿಕೆ ಇರುವಾಗ ಹಣದ ಆಧಾರದ ಮೇಲೆ ದರ್ಶನದ ಆದ್ಯತೆ ನಿರ್ಧಾರವಾಗುವುದು ಎಷ್ಟರಮಟ್ಟಿಗೆ ಸಮಂಜಸ?

ದೇವಾಲಯಗಳನಿರ್ವಹಣೆಗೆಹಣಬೇಕು,ಸಿಬ್ಬಂದಿವೇತನ,ಸ್ವಚ್ಛತೆ,ವಿದ್ಯುತ್,ಭದ್ರತೆ,ಜೀರ್ಣೋದ್ಧಾರ



ಮತ್ತು ಭಕ್ತರಿಗೆ ಸೌಲಭ್ಯ ಕಲ್ಪಿಸಲು ಆದಾಯ ಅಗತ್ಯ ಎಂಬುದನ್ನು ಅಲ್ಲಗಳೆಯಲಾಗದು. ಆದರೆ ಆದಾಯ ಗಳಿಸುವುದೇ ದೇವಾಲಯದ ಪ್ರಮುಖ ಉದ್ದೇಶವಾಗಬಾರದು. ಭಕ್ತರ ಭಾವನೆಗಳನ್ನು ಆರ್ಥಿಕ ಸಂಪನ್ಮೂಲವಾಗಿ ನೋಡುವ ಮನೋಭಾವ ಬೆಳೆಯಬಾರದು. ಭಕ್ತಿಯಿಂದ ಕಾಣಿಕೆ ನೀಡುವುದು ಬೇರೆ, ಹಣ ನೀಡಿದರೆ ಮಾತ್ರ ಉತ್ತಮ ದರ್ಶನ ಅಥವಾ ವಿಶೇಷ ಅನುಕೂಲ ಸಿಗುತ್ತದೆ ಎಂಬ ಭಾವನೆ ಮೂಡುವುದು ಬೇರೆ. ಈ ಎರಡರ ನಡುವಿನ ವ್ಯತ್ಯಾಸವನ್ನು ದೇವಾಲಯಗಳ ಆಡಳಿತ ಮಂಡಳಿಗಳು ಅರ್ಥಮಾಡಿಕೊಳ್ಳಬೇಕು. ಇಂದು ಕೆಲವು ಧಾರ್ಮಿಕ ಕ್ಷೇತ್ರಗಳ ಸುತ್ತಮುತ್ತ ವ್ಯಾಪಾರ ವಹಿವಾಟು ಹೆಚ್ಚಾಗಿರುವುದನ್ನು ಕಾಣಬಹುದು. ದೇವರ ದರ್ಶನಕ್ಕೆ ಹೋಗುವ ಮುನ್ನ ಪಾರ್ಕಿಂಗ್ ಶುಲ್ಕ, ಪೂಜಾ ಸಾಮಗ್ರಿಗಳ ಬೆಲೆ, ವಿವಿಧ ಸೇವೆಗಳ ಶುಲ್ಕ, ಪ್ರಸಾದದ ದರ ಹೀಗೆ ಭಕ್ತರ ಜೇಬಿಗೆ ಹೊರೆ ಬೀಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕೆಲವು ಕಡೆ ಮಧ್ಯವರ್ತಿಗಳ ಹಾವಳಿ, ಧಾರ್ಮಿಕ ನಂಬಿಕೆಯನ್ನು ಬಳಸಿಕೊಂಡು ಅನಗತ್ಯ ಹಣ ವಸೂಲಿ ಮಾಡುವ ಪ್ರವೃತ್ತಿಯೂ ಕಂಡುಬರುತ್ತದೆ. ದೇವರ ಹೆಸರಿನಲ್ಲಿ ನಡೆಯುವ ಪ್ರತಿಯೊಂದು ಆರ್ಥಿಕ ವ್ಯವಹಾರವೂ ಪಾರದರ್ಶಕವಾಗಿರಬೇಕು. ಭಕ್ತರ ನಂಬಿಕೆಯನ್ನು ದುರುಪಯೋಗಪಡಿಸಿಕೊಳ್ಳುವ ಯಾವುದೇ ವ್ಯವಸ್ಥೆಗೆ ಕಡಿವಾಣ ಹಾಕಬೇಕು. ಇದರ ಪರಿಣಾಮ ಭಕ್ತರ ಮನಸ್ಸಿನ ಮೇಲೂ ಬೀಳುತ್ತದೆ. ದೇವಾಲಯಕ್ಕೆ ಹೋದಾಗ ನೆಮ್ಮದಿ ಸಿಗಬೇಕು. ಆದರೆ ಅಲ್ಲಿ ಹಣದ ವ್ಯವಹಾರ, ಮಧ್ಯವರ್ತಿಗಳ ಹಾವಳಿ, ವಿಶೇಷ ದರ್ಶನದ ಪೈಪೋಟಿ, ನೂಕುನುಗ್ಗಲು ಮತ್ತು ಅವ್ಯವಸ್ಥೆ ಕಂಡಾಗ ಭಕ್ತಿಯ ವಾತಾವರಣವೇ ಮರೆಯಾಗುತ್ತದೆ. ದೇವರ ಮೇಲಿನ ನಂಬಿಕೆ ಕಡಿಮೆಯಾಗುವುದಕ್ಕೆ ಇಂತಹ ಅನುಭವಗಳೂ ಒಂದು ಕಾರಣವಾಗಬಹುದು. ವಾಸ್ತವವಾಗಿ ದೇವರ ಮೇಲಿನ ನಂಬಿಕೆಗಿಂತ ದೇವರ ಹೆಸರಿನಲ್ಲಿ ನಡೆಯುವ ಕೆಲವು ವ್ಯವಸ್ಥೆಗಳ ಮೇಲಿನ ನಂಬಿಕೆ ಕುಸಿಯುವ ಅಪಾಯ ಹೆಚ್ಚುತ್ತಿದೆ. ಧರ್ಮದ ಹೆಸರಿನಲ್ಲಿ ನಡೆಯುವ ವ್ಯಾಪಾರೀಕರಣದಿಂದ ನಿಜವಾದ ಭಕ್ತರು ದೇವಾಲಯಗಳಿಂದಲೇ ದೂರವಾಗುವ ಪರಿಸ್ಥಿತಿ ನಿರ್ಮಾಣವಾಗಬಾರದು. ದೇವರು ಯಾರೊಬ್ಬರ ಸ್ವತ್ತಲ್ಲ. ಭಕ್ತಿ ಶ್ರೀಮಂತರಿಗೆ ಮಾತ್ರ ಸೀಮಿತವಲ್ಲ. ಒಬ್ಬ ಸಾಮಾನ್ಯ ಕೂಲಿ ಕಾರ್ಮಿಕನಿಂದ ಹಿಡಿದು ಕೋಟ್ಯಂತರ ರೂಪಾಯಿ ಆಸ್ತಿ ಹೊಂದಿರುವ ಉದ್ಯಮಿಯವರೆಗೆ ಎಲ್ಲರೂ ದೇವರ ಮುಂದೆ ಭಕ್ತರೇ. ಒಬ್ಬ ಬಡ ಭಕ್ತನಿಗೆ ಹಣವಿಲ್ಲದ ಕಾರಣ ದರ್ಶನದಲ್ಲಿ ಹಿಂದುಳಿಯುವ ಅನುಭವವಾಗಬಾರದು. ದೇವಾಲಯಗಳು ಸಮಾನತೆ, ಸೇವೆ, ಮಾನವೀಯತೆ ಮತ್ತು ಆತ್ಮಶಾಂತಿಯ ಕೇಂದ್ರಗಳಾಗಬೇಕು. ಹಣದ ಪ್ರಭಾವಕ್ಕಿಂತ ಭಕ್ತಿಯ ಭಾವನೆಗೆ ಅಲ್ಲಿ ಹೆಚ್ಚಿನ ಗೌರವ ಸಿಗಬೇಕು. ದೇವರ ದರ್ಶನಕ್ಕೆ ಬೆಲೆ ನಿಗದಿಪಡಿಸುವ ವಾತಾವರಣ ಮೂಡಿದರೆ ಧಾರ್ಮಿಕ ಕ್ಷೇತ್ರಗಳ ಮೂಲ ಆಶಯವೇ ಪ್ರಶ್ನಾರ್ಹವಾಗುತ್ತದೆ. ದೇವಾಲಯಗಳ ಆದಾಯ ಮತ್ತು ವೆಚ್ಚದ ವಿಚಾರದಲ್ಲಿಯೂ ಪಾರದರ್ಶಕತೆ ಅಗತ್ಯ. ದೊಡ್ಡ ದೇವಾಲಯಗಳಿಗೆ ಕಾಣಿಕೆ ಹುಂಡಿ, ವಿಶೇಷ ಪೂಜೆ, ಪ್ರಸಾದ ಮಾರಾಟ, ಕೊಠಡಿಗಳ ಬಾಡಿಗೆ, ಪಾರ್ಕಿಂಗ್ ಮತ್ತು ಇತರ ಸೇವೆಗಳ ಮೂಲಕ ಅಪಾರ ಹಣ ಸಂಗ್ರಹವಾಗುತ್ತದೆ. ಈ ಹಣದ ಎಷ್ಟು ಭಾಗವನ್ನು ದೇವಾಲಯದ ನಿರ್ವಹಣೆಗೆ, ಎಷ್ಟು ಭಾಗವನ್ನು ಸಿಬ್ಬಂದಿ ವೇತನಕ್ಕೆ, ಎಷ್ಟು ಭಾಗವನ್ನು ಜೀರ್ಣೋದ್ಧಾರಕ್ಕೆ ಮತ್ತು ಎಷ್ಟು ಭಾಗವನ್ನು ಭಕ್ತರ ಮೂಲಸೌಕರ್ಯಕ್ಕೆ ಬಳಸಲಾಗುತ್ತಿದೆ ಎಂಬ ಮಾಹಿತಿ ಸಾರ್ವಜನಿಕರಿಗೆ ಲಭ್ಯವಾಗಬೇಕು. ಭಕ್ತರು ನೀಡುವ ಕಾಣಿಕೆ ಕೇವಲ ಹಣವಲ್ಲ, ಅದು ಅವರ ನಂಬಿಕೆ ಮತ್ತು ಭಾವನೆಯ ಪ್ರತೀಕ. ಆದ್ದರಿಂದ ಅದರ ಬಳಕೆಯಲ್ಲಿಯೂ ಪಾರದರ್ಶಕತೆ ಇರಬೇಕು. ಪ್ರತಿಯೊಂದು ದೊಡ್ಡ ದೇವಾಲಯದಲ್ಲೂ ವಾರ್ಷಿಕ ಲೆಕ್ಕಪರಿಶೋಧನೆ, ನಿರ್ವಹಣಾ ವರದಿ ಮತ್ತು ಅಭಿವೃದ್ಧಿ ಯೋಜನೆಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವ ವ್ಯವಸ್ಥೆ ರೂಪಿಸಬೇಕು. ಇಲ್ಲಿ ಸರ್ಕಾರದ ಜವಾಬ್ದಾರಿಯ ಜೊತೆಗೆ ದೇವಾಲಯಗಳ ಆಡಳಿತ ಮಂಡಳಿಗಳ ಪಾತ್ರವೂ ಮುಖ್ಯವಾಗುತ್ತದೆ. ದೇವಾಲಯದ ಆದಾಯ ಹೆಚ್ಚಿಸುವುದಷ್ಟೇ ಆಡಳಿತದ ಸಾಧನೆಯಾಗಬಾರದು. ಆ ಆದಾಯಕ್ಕೆ ತಕ್ಕಂತೆ ಭಕ್ತರಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸುವುದು, ದೇವಾಲಯದ ಪ್ರಾಚೀನತೆಯನ್ನು ಉಳಿಸುವುದು ಮತ್ತು ಧಾರ್ಮಿಕ ವಾತಾವರಣವನ್ನು ಕಾಪಾಡುವುದು ಮುಖ್ಯವಾಗಬೇಕು. ದೇವಾಲಯಗಳಲ್ಲಿ ಸ್ವಚ್ಛತಾ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಮಾರ್ಗದರ್ಶಕರು, ತುರ್ತು ವೈದ್ಯಕೀಯ ನೆರವು ಹಾಗೂ ಪ್ರವಾಸಿಗರಿಗೆ ಮಾಹಿತಿ ನೀಡುವ ವ್ಯವಸ್ಥೆ ಇರಬೇಕು. ದೇವಾಲಯದ ಇತಿಹಾಸ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪದ ಮಹತ್ವವನ್ನು ವಿವರಿಸುವ ಮಾಹಿತಿ ಫಲಕಗಳನ್ನು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಸೇರಿದಂತೆ ಪ್ರಮುಖ ಭಾಷೆಗಳಲ್ಲಿ ಅಳವಡಿಸಬೇಕು. ಇದರಿಂದ ವಿದೇಶಿ ಪ್ರವಾಸಿಗರಿಗೂ ನಮ್ಮ ಸಂಸ್ಕೃತಿಯ ಪರಿಚಯವಾಗುತ್ತದೆ. ವಿದೇಶಗಳಲ್ಲಿ ಐತಿಹಾಸಿಕ ಸ್ಮಾರಕಗಳ ನಿರ್ವಹಣೆಗೆ ನೀಡುವ ಮಹತ್ವವನ್ನು ನಾವು ಗಮನಿಸಬೇಕು. ಅಲ್ಲಿ ಪ್ರವಾಸಿಗರು ಒಂದು ಪ್ರಾಚೀನ ಕಟ್ಟಡವನ್ನು ವೀಕ್ಷಿಸಲು ಹೋದಾಗ ಅದರ ಇತಿಹಾಸ, ನಿರ್ಮಾಣದ ಕಾಲಘಟ್ಟ, ವಾಸ್ತುಶಿಲ್ಪದ ವಿಶೇಷತೆ ಮತ್ತು ಸಂರಕ್ಷಣೆಯ ಕುರಿತು ಸಮಗ್ರ ಮಾಹಿತಿ ದೊರೆಯುತ್ತದೆ. ಪ್ರವಾಸಿಗರು ಯಾವ ಮಾರ್ಗದಲ್ಲಿ ಸಾಗಬೇಕು, ಯಾವ ಭಾಗಕ್ಕೆ ಪ್ರವೇಶಿಸಬಾರದು ಎಂಬುದಕ್ಕೂ ವ್ಯವಸ್ಥೆ ಇರುತ್ತದೆ. ನಮ್ಮಲ್ಲಿಯೂ ಇಂತಹ ವ್ಯವಸ್ಥೆ ರೂಪುಗೊಳ್ಳಬೇಕು. ದೇವಾಲಯವನ್ನು ಕೇವಲ ಪೂಜೆ ಮತ್ತು ದರ್ಶನದ ಸ್ಥಳವಾಗಿ ನೋಡದೆ, ಸಾಂಸ್ಕೃತಿಕ ಪ್ರವಾಸೋದ್ಯಮದ ಪ್ರಮುಖ ಕೇಂದ್ರವಾಗಿಯೂ ಅಭಿವೃದ್ಧಿಪಡಿಸಬೇಕು. ಆದರೆ ಪ್ರವಾಸೋದ್ಯಮದ ಹೆಸರಿನಲ್ಲಿ ದೇವಾಲಯಗಳ ಪಾವಿತ್ರ್ಯ ಮತ್ತು ಪ್ರಾಚೀನತೆಗೆ ಧಕ್ಕೆಯಾಗಬಾರದು. ಅಭಿವೃದ್ಧಿ ಮತ್ತು ಸಂರಕ್ಷಣೆ ಎರಡರ ನಡುವೆ ಸಮತೋಲನ ಇರಬೇಕು.

ನಮ್ಮ ಯುವ ಪೀಳಿಗೆಗೆ ದೇವಾಲಯಗಳ ಮಹತ್ವವನ್ನು ಪರಿಚಯಿಸುವ ಕೆಲಸವೂ ನಡೆಯಬೇಕು. ದೇವಾಲಯಕ್ಕೆ ಹೋಗುವುದು ಕೇವಲ ಪೂಜೆ ಸಲ್ಲಿಸುವುದಕ್ಕಷ್ಟೇ ಸೀಮಿತವಾಗಬಾರದು. ಅಲ್ಲಿನ ಇತಿಹಾಸ, ಶಿಲ್ಪಕಲೆ, ಸಾಹಿತ್ಯ, ಸಂಗೀತ, ನೃತ್ಯ ಮತ್ತು ಸಾಮಾಜಿಕ ಬದುಕಿನೊಂದಿಗೆ ದೇವಾಲಯಗಳು ಹೊಂದಿರುವ ಸಂಬಂಧವನ್ನು ತಿಳಿದುಕೊಳ್ಳಬೇಕು. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಐತಿಹಾಸಿಕ ದೇವಾಲಯಗಳ ಅಧ್ಯಯನ ಪ್ರವಾಸಗಳನ್ನು ಆಯೋಜಿಸಬೇಕು. ಸ್ಥಳೀಯ ಇತಿಹಾಸಕಾರರು, ಪುರಾತತ್ವ ತಜ್ಞರು ಮತ್ತು ಕಲಾವಿದರ ಸಹಯೋಗದೊಂದಿಗೆ ದೇವಾಲಯಗಳ ಕುರಿತು ಉಪನ್ಯಾಸ, ಪ್ರದರ್ಶನ ಮತ್ತು ಮಾಹಿತಿ ಕಾರ್ಯಕ್ರಮಗಳನ್ನು ನಡೆಸಬೇಕು. ಆಗ ನಮ್ಮ ಸಂಸ್ಕೃತಿ ಮುಂದಿನ ಪೀಳಿಗೆಗೆ ಕೇವಲ ಪುಸ್ತಕದ ವಿಷಯವಾಗದೆ ಅನುಭವದ ಭಾಗವಾಗುತ್ತದೆ. ಸರ್ಕಾರವು ಪುರಾತತ್ವ ಇಲಾಖೆ, ಧಾರ್ಮಿಕ ದತ್ತಿ ಇಲಾಖೆ, ಸ್ಥಳೀಯ ಆಡಳಿತ ಸಂಸ್ಥೆಗಳು ಮತ್ತು ದೇವಾಲಯಗಳ ಆಡಳಿತ ಮಂಡಳಿಗಳ ನಡುವೆ ಸಮನ್ವಯ ವ್ಯವಸ್ಥೆ ರೂಪಿಸಬೇಕು. ಪ್ರತಿಯೊಂದು ಐತಿಹಾಸಿಕ ದೇವಾಲಯದ ಸ್ಥಿತಿಗತಿಯನ್ನು ಕಾಲಕಾಲ